ಸಂಪುಟ : 9 ಸಂಚಿಕೆ 05 ಪುಟ : 4 ಬೆಲೆ : 3.00 ಬುಧವಾರ ಜನವರಿ 31, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 05 Pages : 4 Price : 3.00 Wednesday JANUARY 31, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### ಮುಂಡರಗಿ ತಾಲೂಕು ಮಟ್ಟದ 'ಜನತಾ ದರ್ಶನ'ಕ್ಕೆ ಚಾಲನೆ ನೀಡಿದ ಸಚಿವ ಎಚ್.ಕೆ. ಪಾಟೀಲ

# ಬಡವರ ಅಭಿವೃದ್ಧಿಗೆ ಶ್ರಮವಹಿಸುವುದೇ ಸರ್ಕಾರದ ಆದ್ಯತೆ

**■ ವಿಜಯಸಾಕ್ಷಿ ಸುದ್ದಿ, ಗದಗ**

ರಾಜ್ಯ ಸರ್ಕಾರ ಆಡಳಿತದಲ್ಲಿ ಪ್ರಭುತ್ವ ತಂದಿದೆ. ಜನರ ಮನೆ ಬಾಗಿಲಿಗೆ ಆಡಳಿತ ತೆಗೆದುಕೊಂಡು ಹೋಗುವ ಇಚ್ಛಾಶಕ್ತಿ ಹೊಂದಿದೆ. ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಜನರ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ಮಾಡುತ್ತಿದೆ ಎಂದು ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ಹೇಳಿದರು.

ಮುಂಡರಗಿ ಪಟ್ಟಣದ ಅನ್ನದಾನೀಶ್ವರ ಕಲ್ಯಾಣ ಮಂಟಪದಲ್ಲಿ ಮಂಗಳವಾರ ತಾಲೂಕು ಆಡಳಿತದಿಂದ ಏರ್ಪಡಿಸಿದ್ದ 'ಜನತಾ ದರ್ಶನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

75 ವರ್ಷದ ನಂತರವೂ ನಮ್ಮ ಶೌಚಾಲಯಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳಲು ಸಾಧ್ಯವಾಗುತ್ತಿಲ್ಲ. ಇಂತಹ ಆಡಳಿತ ವ್ಯವಸ್ಥೆ



ಇದೆ. ತಾತ್ಸಾರ ಮನೋಭಾವ ಆಡಳಿತ ವ್ಯವಸ್ಥೆ ಜಡಗಟ್ಟಿದೆ. ಆದರೆ ಇನ್ಮುಂದೆ ಜಡತ್ವವನ್ನು ನಿವಾರಿಸುತ್ತಿದ್ದೇವೆ. ಆಡಳಿತ ವರ್ಗಕ್ಕೆ ಚುರುಕು ಮುಟ್ಟಿಸಿ ಜನರ ಸಮಸ್ಯೆಗಳನ್ನು ಬಗೆಹರಿಸುತ್ತೇವೆ ಎಂದು ಸಚಿವರು ಹೇಳಿದರು.

ಗದಗ ಜಿಲ್ಲಾಡಳಿತ ಭವನದಲ್ಲಿ ಜರುಗಿದ ಜನತಾ ದರ್ಶನದಲ್ಲಿ ಭಾಗಶಃ ಎಲ್ಲ ಅರ್ಜಿಗಳನ್ನು ಸ್ವೀಕರಿಸಿ ಪರಿಹರಿಸಿದ್ದೇವೆ. ಜನತಾ ದರ್ಶನದಲ್ಲಿ ಸಲ್ಲಿಕೆ ಆಗಿದ್ದ 921 ಅರ್ಜಿಗಳಲ್ಲಿ 171 ಅರ್ಜಿಗಳನ್ನು ತಿರಸ್ಕರಿಸಿದ್ದೇವೆ. 171 ಅರ್ಜಿದಾರರು ಸೌಕರ್ಯ ಹೊಂದಿದವರಾಗಿ, ತೆರಿಗೆ ತುಂಬುವರಾಗಿದ್ದು ಅವರ ಅರ್ಜಿಗಳನ್ನು ತಿರಸ್ಕರಿಸಿದ್ದೇವೆ. ನ್ಯಾಯಯುತ ಅರ್ಜಿಗಳಿಗೆ ನ್ಯಾಯ ಒದಗಿಸುವ ಕೆಲಸ ಮಾಡುವ ಬದ್ಧತೆ ನಮ್ಮ ಸರ್ಕಾರಕ್ಕಿದೆ. ಇಂದು ನಡೆಯುವ ಜನತಾ ದರ್ಶನದಲ್ಲಿ ಫೆ. 28ರ ಒಳಗಾಗಿ ಎಲ್ಲ ಅರ್ಜಿಗಳಿಗೆ ಪರಿಹಾರ ನೀಡುವ ಗುರಿಯನ್ನು ಜಿಲ್ಲಾಡಳಿತ ಹೊಂದಬೇಕು ಎಂದರು.

ಈಗ ಆಡಳಿತದ ವೈಖರಿ ಬದಲಾಗಿದೆ. ಈ ಮೊದಲು ಕೇಂದ್ರದಿಂದ ಗ್ರಾಮದ ಅಭಿವೃದ್ಧಿಗೆ 1 ರೂ. ಬಿಡುಗಡೆ ಆದರೆ ಗ್ರಾಮಕ್ಕೆ ಬರುವಷ್ಟರಲ್ಲಿ 16 ಪೈಸೆ ಬಂದು ಮುಟ್ಟುತ್ತಿತ್ತು. ಪ್ರತಿ ಆಡಳಿತ ವ್ಯವಸ್ಥೆಯಲ್ಲಿ ಲಂಚ ನೀಡಬೇಕಾದ ಅನಿವಾರ್ಯತೆ ಇತ್ತು. ಆದರೆ, ಈಗ ವ್ಯವಸ್ಥೆ ಪಾರದರ್ಶಕವಾಗಿದೆ. ಗೃಹಲಕ್ಷ್ಮೀ ಯೋಜನೆಯಡಿ ಜಿಲ್ಲೆಯಲ್ಲಿ ಪ್ರತಿ ತಿಂಗಳು ಮಹಿಳಾ ಫಲಾನುಭವಿಗಳಿಗೆ ತಲಾ 2 ಸಾವಿರದಂತೆ 42 ಕೋಟಿ ರೂ ವಿತರಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಎಲ್ಲಿಯಾದರೂ ಲಂಚ



ನೀಡುವ ಪ್ರಸಂಗ ಬಂದಿದೆಯಾ ಎಂದು ಸಚಿವರು ಪ್ರಶ್ನಿಸಿದರು. ಸರ್ಕಾರದ ಸಹಾಯಧನ ಅರ್ಹ ಫಲಾನುಭವಿಗಳ ಖಾತೆಗೆ ನೇರವಾಗಿ ಜಮೆ ಮಾಡಲಾಗುತ್ತಿದೆ. ಸರ್ಕಾರದ ಆದ್ಯತೆ ಬಡವರು ಮತ್ತು ಬಡವರ ಅಭಿವೃದ್ಧಿಗೆ ಶ್ರಮವಹಿಸುವುದು ಎಂದು ಸಚಿವರು ಹೇಳಿದರು.

ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನದಿಂದ ರಾಜ್ಯದಲ್ಲಿ 1 ಕೋಟಿಗೂ ಅಧಿಕ ಜನರನ್ನು ಬಡತನ ರೇಖೆಯಿಂದ ಮೇಲೆತ್ತಿದ್ದೇವೆ. ಪ್ರಭುವಿನತ್ತ ಪ್ರಭುತ್ವ ತೆಗೆದುಕೊಂಡು ಹೋಗಬೇಕು. ಪ್ರಜಾಪ್ರಭುತ್ವದಲ್ಲಿ ಪ್ರಭು ಎಂದರೆ ಪ್ರಜೆಗಳು ಎಂದು ಸಚಿವ ಎಚ್. ಕೆ. ಪಾಟೀಲ ಹೇಳಿದರು.

ಕಾರ್ಯಕ್ರಮದಲ್ಲಿ ರಾಜ್ಯ ಖನಿಜ ನಿಗಮದ ಅಧ್ಯಕ್ಷರು ಹಾಗೂ ರೋಣ ಕ್ಷೇತ್ರದ ಶಾಸಕ ಜಿ.ಎಸ್. ಪಾಟೀಲ, ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್., ಉಪ ಅರಣ್ಯ ಸಂರಕ್ಷಣಾಧಿಕಾರಿ ಲೇಖರಾಜ್, ತಹಸೀಲ್ದಾರರ ಧನಂಜಯ ಸೇರಿದಂತೆ ಜಿಲ್ಲಾ ಮಟ್ಟದ, ತಾಲ್ಲೂಕು ಮಟ್ಟದ ಅಧಿಕಾರಿಗಳು, ಸಿಬ್ಬಂದಿಗಳು, ಇದ್ದರು.



> ಜನಪ್ರತಿನಿಧಿಗಳ ದರ್ಪದ ಪರಿಕಲ್ಪನೆ ಬದಲಾಯಿಸಿ ಹೊಸ ಆಡಳಿತ ರೂಪವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಜಾರಿ ಮಾಡುತ್ತಿದೆ. ಕಟ್ಟಕಡೆಯ ಅರ್ಜಿದಾರನ ಮನವಿ ಸ್ವೀಕರಿಸುವವರೆಗೂ ಜನತಾ ದರ್ಶನ ನಿಲ್ಲಿಸುವುದಿಲ್ಲ. ಅರ್ಜಿದಾರರೂ ತಾಳ್ಮೆಯಿಂದ ತಮ್ಮ ಮನವಿ ಸಲ್ಲಿಸಬೇಕು. ಇದೊಂದು ಪ್ರಜಾಪ್ರಭುತ್ವದಲ್ಲಿ ದೊಡ್ಡ ಪ್ರಯೋಗವಾಗಿದೆ.
>
> – ಎಚ್.ಕೆ. ಪಾಟೀಲ.
> ಗದಗ ಜಿಲ್ಲಾ ಉಸ್ತುವಾರಿ ಸಚಿವರು.

### ಅಧಿಕಾರಿಗಳಿಗೆ ಎಚ್ಚರಿಕೆ

ಬಡವರಿಗೆ ಸೌಲಭ್ಯ ನೀಡುವ ಸಮಯದಲ್ಲಿ ವಿಳಂಬ ಅನುಸರಿಸುತ್ತೀರಿ. ನಿಮಗೆ ಎಚ್ಚರಿಕೆ ನೀಡಲಾಗುವುದು. ವ್ಯವಸ್ಥೆ ದುರುಪಯೋಗ ಮಾಡಿಕೊಂಡರೆ ತಪ್ಪಿತಸ್ಥರ ವಿರುದ್ಧ ತಕ್ಕ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಸಚಿವ ಎಚ್. ಕೆ. ಪಾಟೀಲ ಅಧಿಕಾರಿಗಳನ್ನು ಎಚ್ಚರಿಸಿದರು.

---

# 'ಅಂಬಾರಿ' ಬಸ್ ಸೇವೆಗೆ ಸಚಿವ ಎಚ್.ಕೆ. ಪಾಟೀಲ ಚಾಲನೆ

**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ನಗರದಲ್ಲಿ ಸಂಚಾರ ಮಾಡಲು ಡಬಲ್ ಡೆಕ್ಕರ್ 'ಅಂಬಾರಿ' ಬಸ್ ಸೇವೆಗೆ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನಗಳ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ಮಂಗಳವಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ರಾಜ್ಯ ಖನಿಜ ನಿಗಮದ ಅಧ್ಯಕ್ಷರು ಹಾಗೂ ರೋಣ ಶಾಸಕರಾದ ಜಿ.ಎಸ್.ಪಾಟೀಲ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಯುವಜನ ಸಬಲೀಕರಣ ಇಲಾಖೆ ಹಾಗೂ ಕ್ರೀಡಾ ಇಲಾಖೆ ಅಧಿಕಾರಿ ಶರಣು ಗೋಗೇರಿ, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಕೊಟ್ರೇಶ ವಿಭೂತಿ, ಜಿ.ಪಂ.



ಮಾಜಿ ಅಧ್ಯಕ್ಷ ವಾಸಣ್ಣ ಕುರಡಗಿ, ಗಣ್ಯರಾದ ಬಿ.ಬಿ. ಅಸೂಟಿ, ಎಸ್. ಎನ್. ಬಳ್ಳಾರಿ, ಪ್ರಭು ಬುರಬುರೆ, ಅಶೋಕ ಮಂದಾಲಿ, ಶಾಲಾ ವಿದ್ಯಾರ್ಥಿಗಳು ಹಾಜರಿದ್ದರು.

ಸದರಿ ಬಸ್‌ನ ಟಿಕೆಟ್ ದರ ವಿದ್ಯಾರ್ಥಿಗಳಿಗೆ ರೂ.100 ಹಾಗೂ ಸಾರ್ವಜನಿಕರಿಗೆ ರೂ.120 ಆಗಿದೆ. ಅಂಬಾರಿ ಬಸ್‌ನ ಸಂಚಾರದ ಸಮಯ ಬೆಳಿಗ್ಗೆ 9.30ರಿಂದ ಸಂಜೆ 6 ಗಂಟೆಯವರೆಗೆ ಇರುತ್ತದೆ. ಅಂಬಾರಿ ವಾಹನ ಚಲಿಸುವ ಮಾರ್ಗ ಹೊಸ ಬಸ್ ನಿಲ್ದಾಣದಿಂದ–ಬಸವೇಶ್ವರ ಪುತ್ಥಳಿ–ಮ್ಯೂಸಿಯಂ–ಭೀಷ್ಮ ಕೆರೆಯ ಬೋಟಿಂಗ್–ಹೊಸ ಜಿಲ್ಲಾಧಿಕಾರಗಳ ಕಚೇರಿ–ಬಿಂಕದಕಟ್ಟಿ ಪ್ರಾಣಿ ಸಂಗ್ರಹಾಲಯ ಅಥವಾ ಸಾಲುಮರದ ತಿಮ್ಮಕ್ಕ ಪಾರ್ಕ್–ಮರಳಿ ಅದೇ ಮಾರ್ಗವಾಗಿ ಹೊಸ ಬಸ್ ನಿಲ್ದಾಣಕ್ಕೆ ಬಂದು ಸೇರಲಿದೆ.

---

### ಜಲಾನಯನ ಯೋಜನೆಯಡಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದ ಸಚಿವ ಎಚ್.ಕೆ. ಪಾಟೀಲ

# ರೈತರಿಗೆ ವರದಾನವಾದ ರಿವಾರ್ಡ್ ಯೋಜನೆ

**■ ವಿಜಯಸಾಕ್ಷಿ ಸುದ್ದಿ, ಮುಳಗುಂದ**

ರಿವಾರ್ಡ್ ಯೋಜನೆಯು ರೈತರಿಗೆ ವರದಾನವಾಗಿದ್ದು, ಪ್ರತಿಯೊಬ್ಬ ರೈತರೂ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವ ಡಾ. ಎಚ್.ಕೆ. ಪಾಟೀಲ್ ಹೇಳಿದರು.

ಅವರು ಪಟ್ಟಣದ ಬಾಲಲೀಲಾ ಮಾಹಾಂತ ಶಿವಯೋಗಿಗಳ ಗವಿಮಠದಲ್ಲಿ ಜಿಲ್ಲಾ ಪಂಚಾಯಿತಿ ಗದಗ, ಕೃಷಿ ಇಲಾಖೆ ಗದಗ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಬ್ಯಾಂಕ್ ನೆರವಿನ ಜಲಾನಯನ ಯೋಜನೆಯಡಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದರು.



ರೈತರು ನಮ್ಮ ದೇಶದ ಬೆನ್ನೆಲುಬು. ರೈತರು ಆರ್ಥಿಕವಾಗಿ ಅಭಿವೃದ್ಧಿ ಹೊಂದಿದಾಗ ದೇಶ ಅಭಿವೃದ್ಧಿ ಹೊಂದಿದಂತೆ. ಆದುದರಿಂದ ರೈತರಿಗೆ ಈ ರಿವಾರ್ಡ್ ಯೋಜನೆಯಡಿ ವೈಜ್ಞಾನಿಕವಾಗಿ ಬದುಗಳ ನಿರ್ಮಾಣ, ಕೃಷಿಹೊಂಡ ನಿರ್ಮಾಣ ಸೇರಿದಂತೆ ಹತ್ತು ಹಲವು ಸೌಲಭ್ಯಗಳಿದ್ದು, ರೈತರು ಇದರ ಸದುಪಯೋಗ ಪಡೆದಲ್ಲಿ ಅಂತರ್ಜಲ ಮಟ್ಟ ಏರಿಕೆ, ಮಣ್ಣಿನ ಸವಕಳಿ ತಡೆಯಲು ಸಹಕಾರಿಯಾಗುತ್ತದೆ ಎಂದರು.

ಅಧ್ಯಕ್ಷತೆಯನ್ನು ಪ.ಪಂ ಸ್ಥಾಯಿ ಸಮಿತಿ ಅಧ್ಯಕ್ಷ ಮಾಹಾಮತಪ್ಪ ನೀಲಗುಂದ ವಹಿಸಿದ್ದರು. ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ ಜಿ.ಎಚ್, ಉಪ ಕೃಷಿ ನಿರ್ದೇಶಕಿ ಸ್ಫೂರ್ತಿ ಈ.ಎಸ್, ಸಹಾಯಕ ಕೃಷಿ ನಿರ್ದೇಶಕ ಎಂ.ಸಿ. ಕೊರವನವರ, ಎಸ್. ಎಂ. ನೀಲಗುಂದ, ಎಂ.ಡಿ. ಬಟ್ಟೂರ, ಬಿ.ವಿ. ಸುಂಕಾಪೂರ, ಕೆ.ಎಲ್. ಕರಿಗೌಡರ, ಎನ್. ಆರ್. ದೇಶಪಾಂಡೆ, ಎಸ್.ಸಿ. ಬಡ್ನಿ, ಮುಳಗುಂದ ಸಹಾಯಕ ಕೃಷಿ ಅಧಿಕಾರಿ ಎಫ್.ಸಿ. ಗುರಿಕಾರ, ರೈತ ಸಂಘದ ಅಧ್ಯಕ್ಷ ಬಸವರಾಜ ಕರಿಗಾರ ಹಾಗೂ ಸುತ್ತ ಮುತ್ತಲಿನ ಗ್ರಾಮದ ರೈತ ಬಾಂದವರು ಇದ್ದರು.

---

### 'ಸಂವಿಧಾನ ಜಾಗೃತಿ ಜಾಥಾ' ಕಾರ್ಯಕ್ರಮದ ಪೂರ್ವಭಾವಿ ಸಭೆ

# ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಜ.26ರಿಂದ ಫೆ.26ರವರೆಗೆ ನಡೆಯುವ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮದ ಅಂಗವಾಗಿ ಫೆ.13ರಿಂದ 16ರವರೆಗೆ ಲಕ್ಷ್ಮೇಶ್ವರ ತಾಲೂಕು ವ್ಯಾಪ್ತಿಯಲ್ಲಿ ಸಂವಿಧಾನ ರಥ ಸಂಚರಿಸಲಿದೆ. ಈ ವೇಳೆ ಆಯಾ ಭಾಗದ ಗ್ರಾ.ಪಂ ಜನಪ್ರತಿನಿಧಿಗಳು, ಮುಖಂಡರು, ಸಂಘ–ಸಂಸ್ಥೆಯವರು ಗೌರವದೊಂದಿಗೆ ಸಂವಿಧಾನ ಜಾಗೃತಿ ಜಾಥಾವನ್ನು ಸ್ವಾಗತಿಸಿಕೊಳ್ಳಬೇಕು ಎಂದು ತಹಸೀಲ್ದಾರ ವಾಸುದೇವ ಎಂ.ಸ್ವಾಮಿ ಹೇಳಿದರು.

ಈ ಕುರಿತು ಅವರು ತಹಸೀಲ್ದಾರ ಕಚೇರಿಯಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿ ಹಾಗೂ ಸಂಘ–ಸಂಸ್ಥೆಗಳ ಮುಖಂಡರ ಪೂರ್ವಸಿದ್ಧತಾ ಸಭೆ ಕರೆದು ಮಾತನಾಡಿ, ಸಂವಿಧಾನ ಪೀಠಿಕೆ, ಶರಣರ ವಚನಗಳು, ನಮ್ಮ ಭಾಗದ ಸಂಸ್ಕೃತಿ ಬಿಂಬಿಸುವ ಸ್ತಬ್ಧಚಿತ್ರಗಳು ಜಾಥಾದಲ್ಲಿ ಇರುತ್ತದೆ. ನಾಲ್ಕು ಗ್ರಾಮ ಪಂಚಾಯಿತಿಗೆ ಒಬ್ಬರಂತೆ ನೋಡಲ್ ಅಧಿಕಾರಿಯನ್ನು



ನೇಮಿಸಲಾಗುತ್ತಿದೆ. ಸಂವಿಧಾನದ ಕುರಿತು ಶಾಲಾ ಮಕ್ಕಳಿಗೆ ಹೆಚ್ಚಿನ ಅರಿವು ಮೂಡಿಸಲು ಸಂವಿಧಾನ ಆಧಾರಿತವಾಗಿ ವಿವಿಧ ಸ್ಪರ್ಧೆ ಏರ್ಪಡಿಸಿ ವಿಜೇತ ಮಕ್ಕಳಿಗೆ ಸಂವಿಧಾನ ಪೀಠಿಕೆ, ಸಂವಿದಾನ ಓದು ಕಿರು ಪುಸ್ತಕ ಬಹುಮಾನ ನೀಡಲಾಗುವುದು. ಈ ವಿಶೇಷ ಕಾರ್ಯಕ್ರಮವನ್ನು ಅಧಿಕಾರಿಗಳು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಶರಣಯ್ಯ ಕುಲಕರ್ಣಿ ಮಾತನಾಡಿ, ಭಾರತ ಸಂವಿಧಾನ ಮತ್ತು ಏಕತೆ ಸಾರುವ ನಿಟ್ಟಿನಲ್ಲಿ ಜಾಥಾ 26ರಂದೇ ಜಿಲ್ಲಾ ಕೇಂದ್ರದಿಂದ ಹೊರಟಿದೆ. ಸಂವಿಧಾನ ಪೀಠಿಕೆಯ ಪ್ರತಿಗಳನ್ನು ಮೆರವಣಿಗೆ ವೇಳೆ ವಿತರಿಸಲಾಗುತ್ತದೆ. ಸಂವಿಧಾನ ಕುರಿತು ಉಪನ್ಯಾಸ ನೀಡುವವರು ಜಾಥಾದೊಂದಿಗೆ ಇರುತ್ತಾರೆ. ಈ ವೇಳೆ ಗ್ರಾ.ಪಂ ಅಧಿಕಾರಿ ಮತ್ತು ಸಿಬ್ಬಂದಿಗಳು ಹಾಜರಿದ್ದು ಸಂವಿಧಾನದ ಮಹತ್ವ ಮತ್ತು ಸರ್ಕಾರದ ಯೋಜನೆಗಳ ಬಗ್ಗೆ ತಿಳಿಸಬೇಕು ಎಂದರು.

ಸಭೆಯಲ್ಲಿ ಗ್ರೇಡ್–2 ತಹಸೀಲ್ದಾರ ಮಂಜುನಾಥ ಅಮಾಸಿ, ಕಂದಾಯ ನಿರೀಕ್ಷ ಬಿ.ಎಂ ಕಾತರಾಳ, ಮುಖಂಡರಾದ ಗಂಗಾಧರ ಮೆಣಸಿನಕಾಯಿ, ಅನಿಲ ಮುಳಗುಂದ, ಫಕ್ಕಿರೇಶ ನಂದೆಣ್ಣವರ, ವಿಠಲ ನಾಯಕ, ಶೇಖಪ್ಪ ಲಮಾಣಿ, ಕೇಶವ ಕಟ್ಟಿಮನಿ, ಗಂಗಾಧರ ಕರಿನಿಂಗಣ್ಣವರ, ರಮೇಶ ಹಂಗನಕಟ್ಟಿ, ಅನಿಲ ನಂದೆಣ್ಣವರ, ತಾವರೆಪ್ಪ ಲಮಾಣಿ ಇದ್ದರು.

---

### ಸಾರ್ವಜನಿಕರ ಅಹವಾಲುಗಳಿಗೆ ಸ್ಥಳದಲ್ಲಿಯೇ ಪರಿಹಾರ ನೀಡಿದ ಸಚಿವ ಎಚ್.ಕೆ. ಪಾಟೀಲ

# ಜನತಾ ದರ್ಶನದಲ್ಲಿ 340 ಅಹವಾಲುಗಳ ಸ್ವೀಕಾರ

**■ ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ಮುಂಡರಗಿ ನಗರದ ಅನ್ನದಾನಿಶ್ವರ ಕಲ್ಯಾಣ ಮಂಟಪ ಸಭಾಂಗಣದಲ್ಲಿ ಜರುಗಿದ ಜನತಾ ದರ್ಶನದಲ್ಲಿ ಸಾರ್ವಜನಿಕರಿಂದ ಅಹವಾಲುಗಳ ಸುರಿಮಳೆಯೇ ಹರಿದುಬಂದಿತು.

ಸಾರ್ವಜನಿಕರ ಅಹವಾಲಿಗೆ ಸಂಬಂಧಿಸಿದಂತೆ, ಮುಂಡರಗಿ ನಗರದಲ್ಲಿ ಸರ್ಕಾರಿ ಸಭಾಭವನ ನಿರ್ಮಿಸಲು ಸಮಾಜ ಕಲ್ಯಾಣ ಇಲಾಖೆಯಿಂದ ಏಪ್ರಿಲ್ 14ರ ಡಾ.ಅಂಬೇಡ್ಕರ್ ಜಯಂತಿಯಂದು ಶಂಕುಸ್ಥಾಪನೆ ನೆರವೇರಿಸುವ ಭರವಸೆ ನೀಡಿದರು. ಇದರಿಂದ ಈ ಭಾಗದ ಸಾರ್ವಜನಿಕರಿಗೆ ಕಲ್ಯಾಣ ಕಾರ್ಯಗಳನ್ನು ನಡೆಸಲು ಸಹಕಾರಿಯಾಗಲಿದೆ ಎಂದು ಸಚಿವರು ಹೇಳಿದರು.

ಎಸ್.ಎಸ್. ಬೇವೂರ ಅವರು, ಅನುದಾನದಲ್ಲಿ ವಿಕಲಚೇತನರ ಕಲ್ಯಾಣಕ್ಕೆ ಶೇ.5ರಷ್ಟು ಮೀಸಲಿಟ್ಟು



### ಜನ್ಮ ದಿನಾಂಕ ತಿದ್ದುಪಡಿ ಪ್ರಮಾಣಪತ್ರ ವಿತರಣೆ

ಬೆಳಿಗ್ಗೆ ವಿರುಪಾಕ್ಷ ಅವರು, ದಾಖಲೆಗಳಲ್ಲಿ ತಮ್ಮ ಮಗಳ ಜನ್ಮ ದಿನಾಂಕ ತಪ್ಪಾಗಿ ನಮೂದಾಗಿದ್ದು, ಸರಿಪಡಿಸಿ ನಿಡುವಂತೆ ಎರಡು ವರ್ಷಗಳಿಂದ ಅಲೆದಾಡುತ್ತಿದ್ದರೂ ಸಾಧ್ಯವಾಗಿಲ್ಲ ಎಂದು ತಮ್ಮ ಅಳಲನ್ನು ಸಚಿವರಲ್ಲಿ ಹೇಳಿಕೊಂಡರು. ಇದಕ್ಕೆ ಸ್ಪಂದಿಸಿದ ಸಚಿವರು, ಕೂಡಲೇ ಸರಿಪಡಿಸಲು ಸೂಚಿಸಿದ್ದರಿಂದ, 9.9.2000 ಎಂದು ತಪ್ಪಾದ ಜನ್ಮ ದಿನಾಂಕವನ್ನು 9.9.2002 ಎಂದು ತಿದ್ದುಪಡಿ ಮಾಡಿ ಶಿಕ್ಷಣ ಇಲಾಖೆ ಅಧಿಕಾರಿಗಳು ನೀಡಿದರು. ಸರಿಪಡಿಸಿದ ಪ್ರಮಾಣಪತ್ರವನ್ನು ಸ್ಥಳದಲ್ಲಿಯೇ ಅವರಿಗೆ ವಿತರಿಸಲಾಯಿತು.

ಅವರಿಗಾಗಿ ಬಳಕೆ ಮಾಡಬೇಕು ಎಂದು ಕೋರಿದರು. ಇದಕ್ಕೆ ಸಚಿವರು ಕೂಡಲೇ ಈ ಬಗ್ಗೆ ಪರಿಶೀಲನೆ ನಡೆಸಿ ಅರ್ಜಿದಾರರಿಗೆ ಸೂಕ್ತ ಮಾಹಿತಿ ಒದಗಿಸಲು ಸೂಚನೆ ನೀಡಿದರು.

ನಗರದಲ್ಲಿ ಬಿಡಾಡಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಇವುಗಳಿಂದ ಜನಸಾಮಾನ್ಯರ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದ ಮನವಿ ಸ್ವೀಕೃತವಾಗಿತ್ತು. ಇದಕ್ಕೆ ಸಚಿವರು ಇನ್ನು ಒಂದು ತಿಂಗಳಲ್ಲಿ ಬಿಡಾಡಿ ಬೀದಿನಾಯಿಗಳ ನಿಯಂತ್ರಣ ಆಗಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ವಿಶ್ವನಾಥ ಅವರು, ಬ್ಯಾಂಕ್ ಅಧಿಕಾರಿಗಳು ರೈತರಿಗೆ ಬರಗಾಲದಲ್ಲೂ ಸಾಲ ವಸೂಲಿ ಮಾಡಲು ಕಿರುಕುಳ ನೀಡುತ್ತಿದ್ದಾರೆ ಎಂದರು. ಪ್ರತಿಯಾಗಿ ಸಚಿವ ಎಚ್.ಕೆ. ಪಾಟೀಲ ಮಾತನಾಡಿ, ಒತ್ತಾಯದ ಸಾಲ ವಸೂಲಾತಿಯನ್ನು ತಕ್ಷಣ ನಿಲ್ಲಿಸಬೇಕು.

▶▶ 3ನೇ ಪುಟಕ್ಕೆ

### ಮಾಸಾಶನ ಮಂಜೂರು

ಬೆಳಗ್ಗೆ ಜನತಾ ದರ್ಶನ ಆರಂಭದಲ್ಲೇ ಮಹಿಳೆಯೊಬ್ಬಳು ಮಂಜುನಾಥ ಶಾಂತಯ್ಯನಮಠ ಎಂಬ ತನ್ನ ವಿಕಲಾಂಗ ಮಗನೊಂದಿಗೆ ಆಗಮಿಸಿ, ಎರಡು ಸಾವಿರ ಮಾಶಾಸನ ನೀಡಿವಂತೆ ಕೋರಿದರು. ಸಚಿವರು ತಕ್ಷಣ ಅಧಿಕಾರಿಗಳಿಗೆ ಸೂಚಿಸಿದ ಹಿನ್ನೆಲೆಯಲ್ಲಿ, ಅವರಿಗೆ ಮಾಶಾಸನ ಮಂಜೂರಾತಿ ಪತ್ರವನ್ನು ಸಚಿವರು ವಿತರಣೆ ಮಾಡಿದರು.

## ಸಂಪಾದಕೀಯ

# ಪೌರತ್ವ ತಿದ್ದುಪಡಿ ಕಾಯ್ದೆ ಮತ್ತು ಬಿಜೆಪಿ

ಕೇಂದ್ರ ಸರ್ಕಾರದ ಬಹುನಿರೀಕ್ಷಿತ ಪೌರತ್ವ ತಿದ್ದುಪಡಿ ಕಾಯ್ದೆ ಜಾರಿಗೆ ದಿನಗಣನೆ ಆರಂಭವಾದಂತಾಗಿದೆ. 2024ರ ಲೋಕಸಭೆ ಚುನಾವಣೆ ಸಮೀಪವಾಗುತ್ತಿರುವಂತೆ ಪೌರತ್ವ ತಿದ್ದುಪಡಿ ಕಾಯ್ದೆ ಜಾರಿಗೂ ಕಾಲ ಕೂಡಿಬರುವ ಲಕ್ಷಣಗಳು ಕಾಣುತ್ತಿವೆ.

ಭಾವನಾತ್ಮಕ ವಿಷಯಗಳನ್ನು ಮುಂದಿಟ್ಟುಕೊಂಡು ಲೋಕಸಭೆ ಚುನಾವಣೆ ಎದುರಿಸುವ ಬಿಜೆಪಿಯ ಪರಿಪಾಠ, ಪೌರತ್ವ ತಿದ್ದುಪಡಿ ಕಾಯ್ದೆಯ ಮೂಲಕ ಮತ್ತೊಮ್ಮೆ ಮುಂದುವರಿವ ಎಲ್ಲ ಲಕ್ಷಣಗಳಿವೆ. 2024ರ ಲೋಕಸಭೆ ಚುನಾವಣೆಯ ತಂತ್ರಗಾರಿಕೆಯ ಭಾಗವಾಗಿ ಸಿಎಎ ಕಾಯ್ದೆ ಚರ್ಚೆ ಮುನ್ನಲೆಗೆ ಬಂದಿದೆ.

ಈ ಹಿಂದೆಯೂ ಪೌರತ್ವ ತಿದ್ದುಪಡಿ ಕಾಯ್ದೆ ಕುರಿತು ವ್ಯಾಪಕ ಚರ್ಚೆ ನಡೆದಿತ್ತು. ಆದರೆ ರಾಜ್ಯಸಭೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಹೊಂದಿರದ ಕಾರಣ, ಅಲ್ಲಿ ಕಾಯ್ದೆ ಜಾರಿಗೆ ಸೋಲಾಗಬಹುದು ಎನ್ನುವ ಲೆಕ್ಕಾಚಾರ ಒಂದೆಡೆಯಾದರೆ, ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಕಾಯ್ದೆ ಜಾರಿ ಮಾಡಿದರೆ ಮತ್ತಷ್ಟು ಲಾಭ ಆಗುತ್ತದೆ ಇನ್ನೊಂದು ತಂತ್ರಗಾರಿಕೆಯೂ ಇಲ್ಲಿ ಸ್ಪಷ್ಟವಾಗುತ್ತಿದೆ.

ಬಿಜೆಪಿ ಈಗಾಗಲೇ ದೇಶದ ಉದ್ದಗಲಕ್ಕೂ ವಿಕಸಿತ ಸಂಕಲ್ಪ ಭಾರತ ಯಾತ್ರೆಯ ಮೂಲಕ, ತನ್ನ ಪ್ರಚಾರವನ್ನು ಆರಂಭಿಸಿತು. ಮುಂದೆ ಅಯೋಧ್ಯಾ ಶ್ರೀರಾಮ ಮಂದಿರ ಲೋಕಾರ್ಪಣೆಯ ವಿಷಯವನ್ನ ರಾಜಕೀಯವಾಗಿ ಬಳಸಿಕೊಂಡಿತು. ಇದರ ಕೊನೆಯ ಭಾಗವೇ ಪೌರತ್ವ ತಿದ್ದುಪಡಿ ಕಾಯ್ದೆ.

ಕೇಂದ್ರ ಸರ್ಕಾರ ಲೋಕಸಭೆ ಚುನಾವಣೆಗೆ ಹೋಗುವ ಪೂರ್ವದಲ್ಲಿಯೇ ಪೌರತ್ವ ತಿದ್ದುಪಡಿ ಕಾಯ್ದೆಯನ್ನ ಮಂಡನೆ ಮಾಡಲಿದೆ ಎನ್ನುವುದನ್ನು ಬಿಜೆಪಿಯ ಸಂಸದರೇ ಬಹಿರಂಗವಾಗಿ ಹೇಳಿಕೆ ನೀಡಿದ್ದಾರೆ. ಆ ಮೂಲಕ ಲೋಕಸಭೆ ಚುನಾವಣೆಯಲ್ಲಿ ಧರ್ಮಾಧಾರಿತ ರಾಜಕಾರಣಕ್ಕೆ ಬಿಜೆಪಿ ಮುಂದಾಗುವುದು ಸೂಚನೆ ಸ್ಪಷ್ಟವಾಗುತ್ತಿದೆ.

### 'ಜಲ ಶಕ್ತಿ' ಅಭಿಯಾನದ ಕುರಿತ ರಾಜ್ಯಮಟ್ಟದ ಒಂದು ದಿನದ ವಿದ್ಯಾರ್ಥಿ ವಿಚಾರ ಸಂಕಿರಣ

# ಜಲ ಸಂರಕ್ಷಣೆ ಇಂದಿನ ಆದ್ಯ ಕರ್ತವ್ಯ




■ವಿಜಯಸಾಕ್ಷಿ ಸುದ್ದಿ, ಗದಗ

ಪಂಚಭೂತಗಳಲ್ಲಿ ಒಂದಾದ ನೀರು ನಾಗರಿಕತೆಯ ಬೆಳವಣಿಗೆಗೆ ಕಾರಣವಾಗಿದೆ. ಪಶು, ಪಕ್ಷಿ, ಪ್ರಾಣಿಗಳು ಸೇರಿದಂತೆ ಮಾನವ ಕುಲಕ್ಕೆ ನೀರು ಅತ್ಯವಶ್ಯಕ ಎಂದು ಪಿ.ಪಿ.ಜಿ ಮಹಾವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ವಿ.ಎ. ನಿಂಗೋಜಿ ಹೇಳಿದರು.

ಅವರು ಇತ್ತೀಚೆಗೆ ನಗರದ ಕೆ.ಎಲ್.ಇ ಸಂಸ್ಥೆಯ ಜಗದ್ಗುರು ತೋಂಟದಾರ್ಯ ಮಹಾವಿದ್ಯಾಲಯದ ಅರ್ಥಶಾಸ್ತ್ರ ವಿಭಾಗ ಹಾಗೂ ಗದಗ ನೆಹರು ಯುವ ಕೇಂದ್ರದ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ಜಲ ಶಕ್ತಿ' ಅಭಿಯಾನದ ಕುರಿತ ರಾಜ್ಯಮಟ್ಟದ ಒಂದು ದಿನದ ವಿದ್ಯಾರ್ಥಿ ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು, ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜಲ ಸಂರಕ್ಷಣೆ, ಒಣ ವ್ಯವಸಾಯ ಪದ್ಧತಿ ಹಾಗೂ ಮಳೆ ನೀರು ಕೊಯ್ಲಿನ ಮಹತ್ವವನ್ನು ವಿವರಿಸಿ, ನೀರಿನ ಲಭ್ಯತೆಯಿಂದ ಮಾನವ ಜೀವನ ವಿಕಾಸದತ್ತ ಸಾಗಲು ಕಾರಣವಾಗಿದೆ. ನಾಗರಿಕತೆಯ ಬೆಳವಣಿಗೆಯ ಮೂಲ ಸೆಲೆಗಳಾದ ವಿದ್ಯುತ್ ಉತ್ಪಾದನೆ, ಆಧುನಿಕ ವ್ಯವಸಾಯ ಪದ್ಧತಿ, ಕೈಗಾರಿಕೆಗಳ ಸ್ಥಾಪನೆ ಮುಂತಾದ ಕಾರ್ಯಗಳಿಗೆ ನೀರು ಅತ್ಯವಶ್ಯಕ. ನೀರು ಉತ್ಪಾದನೆ ಪ್ರಕ್ರಿಯೆಗೆ ಜೀವಾಳ. ಆದರೆ ಜಲಮೂಲದ ಸಂರಕ್ಷಣೆ ಆಗುತ್ತಿಲ್ಲ. ಜಲ ಮೂಲಗಳ ಸಂರಕ್ಷಣೆ ನಮ್ಮ ಆದ್ಯ ಕರ್ತವ್ಯವಾಗಬೇಕು.

ಕಾಲಕಾಲಕ್ಕೆ ಮಳೆ ಆಗದಿರುವುದರಿಂದ ಸರಿಯಾದ ಕ್ರಮದಲ್ಲಿ ಬೆಳೆ ತೆಗೆಯಲಾಗದೆ ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ರೈತರ ಆತ್ಮಹತ್ಯೆಗೆ ಅವರ ಅನಕ್ಷರತೆಯೇ ಕಾರಣ. ಮಳೆ ನೀರು, ಕೃಷಿ, ಜಲ ಸಂರಕ್ಷಣೆಯ ಕುರಿತು ರೈತರಿಗೆ ಜಾಗೃತಿಯನ್ನು ಮೂಡಿಸುವ ಕೆಲಸವಾಗಬೇಕು. ನೀರಿನ ಸಂರಕ್ಷಣೆ ಮಾಡಿ ಅದನ್ನು ನಮ್ಮ ದಿನಬಳಕೆಗೆ ಬಳಸಬೇಕು ಎಂದು ಹೇಳಿದರು.


ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪದವಿ ಪ್ರಾಚಾರ್ಯ ಪ್ರೊ. ಪಿ.ಜಿ. ಪಾಟೀಲ ಮಾತನಾಡಿ, ನೀರು ಅಮೂಲ್ಯವಾದದ್ದು. ಅದನ್ನು ಸಂರಕ್ಷಣೆ ಮಾಡುವ ಹೊಣೆ ನಮ್ಮ ಮೇಲಿದೆ ಎಂದು ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡಿದರು. ಜಲ ಸಂರಕ್ಷಣೆಯ ಕುರಿತು ರಾಜ್ಯದ ನಾನಾ ಮಹಾ ವಿದ್ಯಾಲಯಗಳಿಂದ 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆಗಮಿಸಿ ತಮ್ಮ ಪ್ರಬಂಧಗಳನ್ನು ಮಂಡಿಸಿದರು.

ಕೆಎಲ್‌ಇ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಐಕ್ಯೂಎಸಿ ಸಂಯೋಜಕರು ಹಾಗೂ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ವೀಣಾ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ವಿಶ್ವವಿದ್ಯಾಲಯದ ಡಾ. ಸಂಗನಗೌಡ ಪಾಟೀಲ್, ಪ್ರೊ. ವಿಜಯಲಕ್ಷ್ಮೀ ಮೆಣಸಿನಕಾಯಿ ನಿರ್ಣಾಯಕರಾಗಿ ಆಗಮಿಸಿದ್ದರು. ಕೆಎಲ್‌ಇ ಜಗದ್ಗುರು ತೋಂಟದಾರ್ಯ ಮಹಾವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ನಾಗರಾಜ್ ಓಬಯ್ಯ ಸರ್ವರನ್ನು ಸ್ವಾಗತಿಸಿ, ಪ್ರಾಸ್ತವಿಕವಾಗಿ ಮಾತನಾಡಿದರು.

ಸುಶ್ಮಿತಾ ಪೂಜಾರ್ ಪ್ರಾರ್ಥನೆಗೈದರು. ರವಿ ಪೂಜಾರ್ ನಿರೂಪಿಸಿದರು. ಡಾ. ಕಿರಣ್ ಸೂಡಿ ವಂದಿಸಿದರು. ವಿದ್ಯಾರ್ಥಿ ಪ್ರತಿನಿಧಿ ಅಭಿಷೇಕ್ ಬೆಳವಡಿ, ಮಹಾವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಗೌರವ ಅತಿಥಿಗಳಾಗಿ ಆಗಮಿಸಿದ ಐಕ್ಯೂಎಸಿ ಸಂಯೋಜಕ ಪ್ರೊ. ಪ್ರದೀಪ್ ಸಂಗಪ್ಪಗೋಳ್ ಮಾತನಾಡಿ, ಜಲ ಸಂರಕ್ಷಣೆ ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಹಾಗಾಗಿ ಇಂದಿನ ಯುವ ಪೀಳಿಗೆ ಮಳೆ ನೀರು ಕೊಯ್ಲನ್ನು ಗ್ರಾಮೀಣ ಭಾಗಗಳಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ನೆಹರು ಯುವ ಕೇಂದ್ರದ ಪ್ರತಿನಿಧಿ ವೀರೇಂದ್ರ ಪಾಟೀಲ್ ಗ್ರಾಮ ಪಂಚಾಯಿತಿ ಅಡಿಯಲ್ಲಿ ಬರುವ ಜಲ ಸಂರಕ್ಷಣೆಯ ಯೋಜನೆ ಕುರಿತು ಮಕ್ಕಳಿಗೆ ಮಾಹಿತಿ ನೀಡಿ, ಇಂದಿನ ಯುವಕರು ಜಲ ರಕ್ಷಣೆಯ ರೂವಾರಿಗಳಾಗಬೇಕು ಎಂದರು.

# ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದಿಂದ ಸಾಧನಾ ಸಮಾವೇಶ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಆರ್ಥಿಕವಾಗಿ ಸದೃಢರಾಗಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ ಸಹಕಾರಿಯಾಗಿದೆ ಎಂದು

ಸುಕ್ಷೇತ್ರ ಮಣಕವಾಡದ ಅಭಿನವ ಮೃತ್ಯುಂಜಯ ಮಾಹಾಸ್ವಾಮಿಗಳು ಹೇಳಿದರು.

ಅವರು ಸಮೀಪದ ಚಿಂಚಲಿ ಗ್ರಾಮದಲ್ಲಿ ನೀಲಗುಂದ ವಲಯದ ವತಿಯಿಂದ ಸಾಮೂಹಿಕ ಬಿಲ್ವಾರ್ಚನೆ ಹಾಗೂ ಧಾರ್ಮಿಕ ಕಾರ್ಯಕ್ರಮ, ಸಾಧನಾ ಸಮಾವೇಶದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಲೋಕ ಕಲ್ಯಾಣಾರ್ಥವಾಗಿ ಹಲವಾರು ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ನೊಂದವರ ಬಾಳಿಗೆ ಬೆಳಕಾಗಿದೆ. ಸಾಕಷ್ಟು ಕುಟುಂಬಗಳು ಆರ್ಥಿಕವಾಗಿ ಸದೃಢರಾಗುವಂತೆ ಶ್ರಮಿಸುತ್ತ ಶ್ಲಾಘನಿಯ ಕಾರ್ಯ ಮಾಡುತ್ತಿದೆ ಎಂದರು.

ಯೋಜನೆಯ ಜಿಲ್ಲಾ ಯೋಜನಾಧಿಕಾರಿ ಯೋಗೀಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಅಧ್ಯಕ್ಷತೆಯನ್ನು ಚಿಂಚಲಿ ಗ್ರಾ.ಪಂ ಅಧ್ಯಕ್ಷೆ ದೇವಮ್ಮ ಹೇಮರೆಡ್ಡಿ ವಹಿಸಿದ್ದರು. ಅಪ್ಪಣ್ಣಾ ಇನಾಮತಿ, ಪ್ರಕಾಶಗೌಡ್ರ ಪಾಟೀಲ್, ವಿಜಯ ಪೂಜಾರ, ಅಮೃತರಾಜ ಪತ್ತಾರ, ಹೇಮಣ್ಣಾ ಬಾಲರೆಡ್ಡಿ, ಶಿವಕುಮಾರ ಅರಮನಿ, ದಾವಲಸಾಬ ಸಂದಿಮನಿ, ಖಾಜಿಮುನಿರ ನಾಯ್ಕರ, ಸುರೇಂದ್ರ ನಾಯ್ಕ, ಗಂಗಮ್ಮ, ಮೇಲ್ವಿಚಾರಕ ರಾಜು ಲಕ್ಕುಂಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ಸರ್ವ ಪದಾಧಿಕಾರಿಗಳು ಇದ್ದರು.

# ಗಮನ ಸೆಳೆದ ಕೃಷಿ ವಸ್ತು ಪ್ರದರ್ಶನ



■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಶ್ರೀ ಗವಿಸಿದ್ದೇಶ್ವರ ಜಾತ್ರೆಯಲ್ಲಿ ಕೊಪ್ಪಳ ಕೃಷಿ ಇಲಾಖೆಯಿಂದ ಆಯೋಜಿಸಿರುವ ಕೃಷಿ ವಸ್ತು ಪ್ರದರ್ಶನವು ರೈತರು ಹಾಗೂ ಸಾರ್ವಜನಿಕರನ್ನು ಆಕರ್ಷಿಸಿತು.

ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ ಕೃಷಿ ಇಲಾಖೆಯಿಂದ ಜ.27ರಿಂದ 29ರವರೆಗೆ ಮೂರು ದಿನಗಳ ಕಾಲ ಜಾತ್ರಾ ಆವರಣದಲ್ಲಿ ಹಮ್ಮಿಕೊಂಡಿದ್ದ ಕೃಷಿ ವಸ್ತು ಪ್ರದರ್ಶನಕ್ಕೆ ಕೊಪ್ಪಳ ಸಂಸದ ಸಂಗಣ್ಣ ಕರಡಿ ಚಾಲನೆ ನೀಡಿದರು. ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಕೃಷಿ ವಸ್ತು ಪ್ರದರ್ಶನ ಮಳಿಗೆ ಉದ್ಘಾಟಿಸಿದರು.

ಈ ಸಂರ್ಭದಲ್ಲಿ ಜಿಲ್ಲಾಧಿಕಾರಿ ನಲಿನ್ ಅತುಲ್, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೆಯ, ಜಿ.ಪಂ ಮಾಜಿ ಅಧ್ಯಕ್ಷ ಕೆ.ರಾಜಶೇಖರ ಹಿಟ್ನಾಳ್, ಜಿ.ಪಂ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಜಂಟಿ ಕೃಷಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕೃಷ್ಣ ಉಕ್ಕುಂದ್ ಸೇರಿದಂತೆ ಹಲವು ಗಣ್ಯರು, ಕೃಷಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ಪ್ರದರ್ಶನದಲ್ಲಿ ವಿವಿಧ ಅಲಂಕಾರಿಕ ಸಂಪ್ರದಾಯಿಕ ಕೃಷಿಯ ಸಲಕರಣೆಗಳ ಪ್ರದರ್ಶಿಕೆ, ಸಾವಯವ ಕೃಷಿ, ಸಮಗ್ರ ಕೃಷಿ ಪದ್ಧತಿ, ಆರೋಗ್ಯದಲ್ಲಿ ಸಿರಿಧಾನ್ಯಗಳ ಮಹತ್ವ ಮತ್ತು ಇಲಾಖೆಯ ಯೋಜನೆಗಳ ಮಾಹಿತಿಗಳ ಬಗ್ಗೆ ವಿವರಣೆ ಅನಾವರಣಗೊಳಿಸಲಾಯಿತು.

# ವಚನ ಓದು (ಅರ್ಥ ವಿವರಣೆ) ಸ್ಪರ್ಧೆ

■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ನರಗುಂದ ತಾಲೂಕಿನ ಶಿರೋಳ, ಶ್ರೀ ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವದ ಅಂಗವಾಗಿ ಹಾಗೂ ಲಿಂ. ಪೂಜ್ಯ ಮ.ನಿ.ಪ್ರ ಗುರುಬಸವ ಮಹಾಸ್ವಾಮಿಗಳ ಸ್ಮರಣಾರ್ಥ, ಕರ್ನಾಟಕ ರಾಜ್ಯ ಬಣಜಿಗ ಕ್ಷೇಮಾಭಿವೃದ್ಧಿ ಸಂಘ, ಶಿರೋಳ ಗ್ರಾಮ ಘಟಕ ಮತ್ತು ಗುರುಬಸವ ಕಲ್ಯಾಣ ಸಂಸ್ಥೆಯ ಸಹಯೋಗದಲ್ಲಿ ಫೆ.1ರಂದು ವಚನ ಓದು (ಅರ್ಥ ವಿವರಣೆ) ಸ್ಪರ್ಧೆ ಏರ್ಪಡಿಸಲಾಗಿದೆ.

ಪ್ರಥಮ ಬಹುಮಾನ 3,001 ರೂ, ದ್ವಿತೀಯ 2,501 ರೂ, ತೃತೀಯ 2,001 ರೂ, ಚತುರ್ಥ 1,501 ರೂ ಬಹುಮಾನವಿದೆ. ಎಲ್ಲರೂ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದ್ದು, ಪ್ರತಿಯೊಬ್ಬರಿಗೂ ಎರಡು ವಚನ ಮತ್ತು ಅರ್ಥ ವಿವರಣೆ ಹೇಳಬೇಕು.

ದಿವ್ಯ ಸಾನ್ನಿಧ್ಯವನ್ನು ಜಗದ್ಗುರು ಶ್ರೀ ತೋಂಟದ ಸಿದ್ದರಾಮ ಸ್ವಾಮಿಗಳು, ಸಾನ್ನಿಧ್ಯವನ್ನು ಶ್ರೀ ಶಾಂತಲಿಂಗ ಮಹಾಸ್ವಾಮಿಗಳು, ಉದ್ಘಾಟಕರಾಗಿ ಶಿವಾನಂದ ಶೇಬಣ್ಣವರ, ಅಧ್ಯಕ್ಷತೆಯನ್ನು ಚಂದ್ರಶೇಖರ ಸೋಬರದ, ಉಪನ್ಯಾಸಕರಾಗಿ ಕೆ.ಎಸ್. ಕೋರಿಶೆಟ್ಟರ್(ಹೈಕೋರ್ಟ್ ವಕೀಲರು), ಮುಖ್ಯ ಅಥಿತಿಗಳಾಗಿ ವಿ.ಎಚ್. ಸಾಂಬ್ರಾಣಿ (ನಿವೃತ್ತ ನ್ಯಾಯಾಧೀಶರು), ಡಾ. ಬಸವರಾಜ ಚವಡಿ, ಮಹೇಶ ಕುಂದರಗಿ, ವಿ.ಕೆ. ಮರೆಗುದ್ದಿ, ಆರ್.ಪಿ. ಪಟ್ಟಣಶೆಟ್ಟಿ, ವಾಯ್.ಬಿ. ಸಂಕನಗೌಡ್ರ, ಜಾತ್ರಾ ಸಮಿತಿ ಪದಾಧಿಕಾರಿಗಳಾದ ಲಾಲಸಾಬ್ ಅರಗಂಜಿ, ವೀರಯ್ಯ ದೊಡಮನಿ, ಶರಣಪ್ಪ ಕಾಡಪ್ಪನವರ, ಉಮೇಶ ಮರೆಗುದ್ದಿ ಉಪಸ್ಥಿತರಿರುವರು.

ಹೆಸರು ನೋಂದಾಯಿಸಿಕೊಳ್ಳಲು ಸಿದ್ದು ಅಂಗಡಿ–8747976711, ಕುಮಾರ ಮರೆಗುದ್ದಿ– 9611869702, ಶ್ರೀಕಾಂತ ಉಳ್ಳಾಗಡ್ಡಿ–9740383582, ಸಿದ್ದು ಶೆಟ್ಟರ್–9606299722 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

# ತಾಲೂಕಿನ ವಿವಿಧೆಡೆ 'ಸಂವಿಧಾನ ಜಾಗೃತಿ ಜಾಥಾ'




■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿ.ಪಂ, ತಾ.ಪಂ, ಸಮಾಜ ಕಲ್ಯಾಣ ಇಲಾಖೆ, ಗ್ರಾ.ಪಂ ಸಹಯೋಗದಲ್ಲಿ ಗದಗ ತಾಲೂಕಿನ ಹೊಂಬಳ, ಲಿಂಗದಾಳ, ಬಳಗಾನೂರ ಹಾಗೂ ಕದಡಿ ಗ್ರಾ.ಪಂ ಮೂಲಕ 'ಸಂವಿಧಾನ ಜಾಗೃತಿ ಜಾಥಾ' ಸ್ತಬ್ಧಚಿತ್ರದೊಂದಿಗೆ ಸಂಚರಿಸಿತು.

ಶಾಲಾ ಮಕ್ಕಳಿಗೆ ಏರ್ಪಡಿಸಲಾಗಿದ್ದ ರಸಪ್ರಶ್ನೆ, ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಆಡಳಿತಾಧಿಕಾರಿಗಳು, ಶಾಲಾ ಕಾಲೇಜಿನ ಪ್ರಾಚಾರ್ಯರು, ಮುಖ್ಯೋಪಾಧ್ಯಾಯರು, ಶಿಕ್ಷಕರು, ನೋಡಲ್ ಅಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು, ಸಹಾಯಕ ನಿರ್ದೇಶಕರು ಮುಂತಾದವರಿದ್ದರು.

# ಹೊಸ ಬಸ್‌ಗಾಗಿ ಆಗ್ರಹಿಸಿ ಸಚಿವರಿಗೆ ಮನವಿ



■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯ ಮತ್ತು ಅಂತರ್‌ರಾಜ್ಯಗಳಿಂದ ಗದಗ ಜಿಲ್ಲೆಗೆ ಆಗಮಿಸುವ ಪ್ರವಾಸಿಗರಿಗೆ ಸುಸಜ್ಜಿತ ಬಸ್ ಸಂಚಾರಕ್ಕೆ ಅಗತ್ಯ ಕ್ರಮ ಜರುಗಿಸಬೇಕೆಂದು ಗದಗ ವಿಭಾಗದ ಸಾರಿಗೆ ಸಂಸ್ಥೆ ಜಂಟಿ ಕಾರ್ಮಿಕ ಸಂಘಟನೆಗಳ ಕ್ರಿಯಾ ಸಮಿತಿಯು ಪ್ರವಾಸೋದ್ಯಮ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲರಿಗೆ ಮನವಿ ಸಲ್ಲಿಸಿ ಆಗ್ರಹಿಸಿದರು.

ಸಾರಿಗೆ ಸಂಸ್ಥೆಯ ಎಸ್.ಸಿ/ಎಸ್.ಟಿ ಯೂನಿಯನ್ ಪ್ರಧಾನ ಕಾರ್ಯದರ್ಶಿ ಎಚ್.ಸಿ. ಕೊಪ್ಪಳ ಮನವಿ ಸಲ್ಲಿಸಿ ಮಾತನಾಡಿ, ಗದಗ ಜಿಲ್ಲಾ ಕೇಂದ್ರವಾಗಿದ್ದು ಗದಗ–ಬೆಂಗಳೂರು, ಇತರ ದೂರದ ಊರುಗಳ ಮಾರ್ಗದ ಬಸ್‌ಗಳು ಇಲ್ಲದಿರುವುದು ಗದಗ ಕೇಂದ್ರಕ್ಕೆ ಕಪ್ಪು ಚುಕ್ಕೆಯಾಗಿದೆ. ಇದಕ್ಕೆ ಇಲ್ಲಿನ ಅಧಿಕಾರಿಗಳ ಅಸಡ್ಡೆಯೂ ಕಾರಣ. ಗದಗ ವಿಭಾಗದಲ್ಲಿ 16 ಖಾಸಗಿ ಬಸ್‌ಗಳು ನಿತ್ಯ ಗದಗ–ಬೆಂಗಳೂರು, ಬೆಂಗಳೂರು–ಗದಗ ಸಂಚರಿಸುತ್ತವೆ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಿಂತಲೂ ಉತ್ತಮ ಗುಣಮಟ್ಟದ ಸೇವೆಯನ್ನು ಈ ಬಸ್‌ಗಳು ಒಗಿಸುವುದರಿಂದ ಪ್ರಯಾಣಿಕರು ಈ ಬಸ್‌ಗಳನ್ನು ಅವಲಂಬಿಸಿದ್ದಾರೆ.

ನಿವೃತ್ತ ಸಾರಿಗೆ ನೌಕರರ ಬಾಕಿ ಇರುವ ಹಣವನ್ನು ಮಂಜೂರು ಮಾಡಿಸಲು ಕ್ರಮ ಜರುಗಿಸಬೇಕು. 2020ರಿಂದ ಬಾಕಿ ಇರುವ ವೇತನ ಪರಿಷ್ಕರಣೆಯ ವ್ಯತ್ಯಾಸ ಹಣವನ್ನು ಕೂಡಲೇ ಪಾವತಿಸಲು ಅಗತ್ಯ ಕ್ರಮ ಜರುಗಿಸಬೇಕೆಂದು ಎಚ್.ಸಿ. ಕೊಪ್ಪಳ ಸಚಿವ ಎಚ್. ಕೆ. ಪಾಟೀಲರಿಗೆ ಮನವಿ ಸಲ್ಲಿಸಿ ಆಗ್ರಹಿಸಿದರು.

ಮನವಿ ಸ್ವೀಕರಿಸಿದ ಸಚಿವರು, ಈ ಕುರಿತು ಅಗತ್ಯ ಕ್ರಮ ಜರುಗಿಸಲಾಗುವದು. ಗದಗ ಹಾಗೂ ಹುಬ್ಬಳ್ಳಿಯ ವಿಭಾಗೀಯ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿ ಕ್ರಮ ಜರುಗಿಸುವದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಡಿ.ಆರ್. ಪಾಟೀಲರೂ ಧ್ವನಿಗೂಡಿಸಿ ಸಾರಿಗೆ ವ್ಯವಸ್ಥೆ ಸುಧಾರಣೆಗೆ ಸಚಿವರ ಗಮನ ಸೆಳೆದರು. ಗದಗ ಎಐಟಿಯುಸಿ ಅಧ್ಯಕ್ಷ ಶಾಂತಪ್ಪ ಮುಳವಾಡ ಮುಂತಾದವರಿದ್ದರು.

# ಅಲ್ಪಸಂಖ್ಯಾತರ ಯುವ ಘಟಕ ಉದ್ಘಾಟನೆ



■ವಿಜಯಸಾಕ್ಷಿ ಸುದ್ದಿ, ಗದಗ

ಜೈ ಭೀಮ್ ಸಂಘರ್ಷ ಸಮಿತಿಯ ಅಲ್ಪಸಂಖ್ಯಾತರ ಯುವ ಘಟಕ ಉದ್ಘಾಟನಾ ಸಮಾರಂಭ ಇತ್ತೀಚೆಗೆ ಜರುಗಿತು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ರಾಜ್ಯಾಧ್ಯಕ್ಷ ಬಸಂತ್‌ಕುಮಾರ್ ಅನಂತಪುರ್ ಮಾತನಾಡಿ, ಸಂಘಟನೆಯನ್ನು ಬಲಪಡಿಸಿ ಅನ್ಯಾಯವಾದಲ್ಲಿ ಹೋರಾಟಕ್ಕೆ ಮುಂದಾಗಬೇಕೆಂದು ಕರೆ ನೀಡಿದರು.

ರಾಜ್ಯ ದಲಿತ ಮುಖಂಡರಾದ ಎಸ್.ಎನ್. ಬಳ್ಳಾರಿ, ಕರ್ನಾಟಕ ಮಾದಿಗ ಸಂಘರ್ಷ ಸಮಿತಿ ಅಧ್ಯಕ್ಷ ರಾಘವೇಂದ್ರ ಪರಸಪ್ಪ ಪರಾಪೂರ ಮಾತನಾಡಿದರು. ಜೈ ಭೀಮ ಸಂಘರ್ಷ ಸಮಿತಿಯ ಗದಗ ಜಿಲ್ಲಾಧ್ಯಕ್ಷ ಗಣೇಶ್ ಹುಬ್ಬಳ್ಳಿ ನೇತೃತ್ವದಲ್ಲಿ ನೂತನವಾಗಿ ಅಲ್ಪಸಂಖ್ಯಾತರ ಯುವ ಅಧ್ಯಕ್ಷರಾಗಿ ಇಮಾಮ್‌ಹುಸೇನ್ ಕುನ್ನಿಬಾವಿ, ಉಪಾಧ್ಯಕ್ಷರಾಗಿ ನಜೀರ್‌ಸಾಬ್ ಕುನ್ನಿಬಾವಿ, ಕಾರ್ಯದರ್ಶಿಯಾಗಿ ಎನ್. ಕೆ. ಕುನ್ನಿಬಾವಿ ಇವರನ್ನು ಆಯ್ಕೆ ಮಾಡಿ ಆದೇಶ ಪತ್ರ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಸಮಿತಿಯ ಉಪಾಧ್ಯಕ್ಷ ಮಂಜುನಾಥ ಎಫ್. ತೌಜಲ್, ಪ್ರಮುಖರಾದ ಬಸವರಾಜ ಬದಾಮಿ, ರಾಷ್ಟ್ರೀನ್ ಜೋಸೆಫ್, ರಾಜೇಶ ವಿ.ಶೆಟ್ಟರ್, ಇಮಾಮ ಕುನ್ನಿಬಾವಿ, ಸಮೀರ ಕುನ್ನಿಬಾವಿ, ಶಿವಣ್ಣ ಕಡಿವಾಲ, ಹೇಮಂತ ಹುಬ್ಬಳ್ಳಿ, ಯಶವಂತ ಹುಬ್ಬಳ್ಳಿ, ಶ್ರೀಕಾಂತ ಹಲವಾಗಲಿ, ಮಡಿವಾಳ ಸಮಾಜದ ಮುಖಂಡರಾದ ಕೃಷ್ಣಪ್ಪ ಮಡಿವಾಳರ ಉಪಸ್ಥಿತರಿದ್ದರು.

# ಜನರು ದ್ವೇಷ ರಾಜಕಾರಣಕ್ಕೆ ಬಲಿಯಾಗಬಾರದು

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಮಂಡ್ಯದ ಕೆರೆಗೋಡು ಗ್ರಾಮದಲ್ಲಿ ಹಾರಿಸಲಾಗಿದ್ದ ಹನುಮಧ್ವಜ ಕೆಳಗಿಳಿಸಿ ರಾಷ್ಟ್ರಧ್ವಜ ಹಾರಿಸಿದ ವಿಚಾರವನ್ನು ರಾಜಕೀಯಗೊಳಿಸಿ ಜನರ ದಾರಿ ತಪ್ಪಿಸುವ ಬಿಜೆಪಿ ಮತ್ತು ಜೆಡಿಎಸ್ ನಾಯಕರ ವರ್ತನೆ ಖಂಡನೀಯ ಎಂದು ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾದ ಕರ್ನಾಟಕ ರಾಜ್ಯ ಅಧ್ಯಕ್ಷ ಅಡ್ವಕೇಟ್ ತಾಹೇರ್ ಹುಸೇನ್ ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಷ್ಟ್ರಧ್ವಜ ಹಾರಿಸಲು ಅನುಮತಿ ಪಡೆದು, ಕೇಸರಿಧ್ವಜ ಹಾರಿಸಲು ಮುಂದಾಗಿರುವುದು ಸರಿಯಲ್ಲ. ಸರ್ಕಾರದ ವಿರುದ್ಧ ಜನರನ್ನು ಈ ರೀತಿ ಎತ್ತಿ ಕಟ್ಟುವುದನ್ನು ಸಮರ್ಥಿಸಲಾಗದು. ಈ ಮೂಲಕ ಜನರನ್ನು ಭಾವನಾತ್ಮಕವಾಗಿ ಕೆರಳಿಸುವ ರಾಜಕೀಯಕ್ಕೆ ಬಿಜೆಪಿ ಮತ್ತು ಜೆಡಿಎಸ್ ಮುಂದಾಗಿದೆಯೇ ಎಂದು ಪ್ರಶ್ನಿಸಿರುವ ಅವರು, ಸರಕಾರ ಜನರಿಗೆ ವಾಸ್ತವಾಂಶಗಳನ್ನು ತಿಳಿಸಬೇಕು. ಜನರು ನಿಜಾಂಶಗಳನ್ನು ಅರಿತು ಸಮಾಜದಲ್ಲಿ ಶಾಂತಿ–ಸುವ್ಯವಸ್ಥೆ ಕಾಪಾಡಲು ಶ್ರಮಿಸಬೇಕು. ದ್ವೇಷ ರಾಜಕೀಯಕ್ಕೆ ಬಲಿಯಾಗಬಾರದು ಎಂದಿದ್ದಾರೆ.



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಹಿದಾಯತ್ ಜೆ.ಯು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ಮಹಾತ್ಮ ಗಾಂಧಿಯವರ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಗಾಂಧೀಜಿ ಅವರ ಜೀವನ ಹಾಗೂ ಅವರ ವ್ಯಕ್ತಿತ್ವಗಳ ಕುರಿತಂತೆ ತಿಳಿಸಲಾಯಿತು. ಈ ಸಂದರ್ಭದಲ್ಲಿ ಶಾಲಾ ಸಂಸ್ಥೆಯ ಅಧ್ಯಕ್ಷರಾದ ಜುನೈದ್ ಉಮಚಗಿ, ಮುಖ್ಯ ಗುರುಗಳು, ಶಿಕ್ಷಕಿಯರು ಹಾಗೂ ಶಾಲಾ ಮಕ್ಕಳು ಉಪಸ್ಥಿತರಿದ್ದರು.

## ಜನತಾ ದರ್ಶನದಲ್ಲಿ 340 ಅಹವಾಲುಗಳ ಸ್ವೀಕಾರ

▶▶ ಮೊದಲನೇ ಪುಟದಿಂದ

ಸರ್ಕಾರದ ಬರ ಪರಿಹಾರ ಸಹಾಯಧನವನ್ನು ರೈತರ ಸಾಲಕ್ಕೆ ಹೊಂದಾಣಿಕೆ ಮಾಡಿಕೊಳ್ಳಬಾರದು. ಈ ಕುರಿತು ಜಿಲ್ಲಾಧಿಕಾರಿಗಳು ಕ್ರಮವಹಿಸಲು ತಿಳಿಸಿದರು. ಮುಂದಿನ ಅಹವಾಲುನ್ನು ಸ್ವೀಕರಿಸಿ, ಮಾನಸಾ ಕೃಷ್ಣಪ್ಪ ರಾಮೇನಹಳ್ಳಿಯವರಿಗೆ ಶ್ರವಣ ಯಂತ್ರವನ್ನು ನೀಡಲು ಆರೋಗ್ಯಧಿಕಾರಿಗಳಿಗೆ ಸೂಚಿಸಿದರು. ಸ್ವಾಮಿ ವಿವೇಕಾನಂದ ಉದ್ಯಾವನವನ್ನು ಓರ್ವ ವೈದ್ಯರು ಪಂಚವಟಿ ಔಷದಿ ವನಕ್ಕಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಹನಮಪ್ಪ ಚನ್ನದಾಸರ ನೀಡಿದ ಅಹವಾಲನ್ನು ಸ್ವೀಕರಿಸಿ, ಫೆಬ್ರವರಿ 5ರೊಳಗೆ ತೆರವುಗೊಳಿಸಿ ಸಾರ್ವಜನಿಕ ಬಳಕೆಗೆ ಅವಕಾಶ ನೀಡಲು ಸಂಬಂಧಿಸಿದ ಅಧಿಕಾರಿಗಳಿಗೆ ಸಚಿವರು ತಿಳಿಸಿದರು.

ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಮುಂಡವಾಡದ ಸಂಗನಗೌಡ ಶೇಖರಗೌಡ ಪಾಟೀಲರ ಅಹವಾಲನ್ನು ಸ್ವೀಕರಿಸಿ, 15 ದಿನದೊಳಗೆ ಸಮಸ್ಯೆಯನ್ನು ಪರಿಹರಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು. ದುರಗವ್ವ ಬಾಗೇವಾಡಿ ಅವರಿಗೆ ಭೂ ಒಡೆತನದ ಕಾಯ್ದೆ ಪ್ರಕಾರ ಅಂಬೇಡ್ಕರ್ ನಿಗಮದಿಂದ ನೀಡಿದ ಭೂಮಿಯನ್ನು ಪುಸಲಾಯಿಸಿ ಸ್ಥಳೀಯರು ತೆಗೆದುಕೊಂಡಿದ್ದು, ಅದನ್ನು ಮರಳಿ ಒದಗಿಸಿಕೊಡುವಂತೆ ಮನವಿ ಮಾಡಿದಾಗ ಸ್ಪಂದಿಸಿದ ಸಚಿವರು, ಈ ಪ್ರಕರಣದಲ್ಲಿರುವ ತಪ್ಪಿಸ್ಥರ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳುವಂತೆ ಅಂಬೇಡ್ಕರ ನಿಗಮದ ವ್ಯವಸ್ಥಾಪಕರಾದ ರಾಯ್ಕರ ಅವರಿಗೆ ತಿಳಿಸಿದರು.

ಜನತಾ ದರ್ಶನ ಕಾರ್ಯಕ್ರಮದಲ್ಲಿ ರಾಜ್ಯ ಖನಿಜ ಮತ್ತು ಖನಿಜ ಸಂಪತ್ತು ನಿಗಮದ ಅಧ್ಯಕ್ಷರು ಹಾಗೂ ರೋಣ ಕ್ಷೇತ್ರದ ಶಾಸಕರಾದ ಜಿ.ಎಸ್. ಪಾಟೀಲ, ಶಿರಹಟ್ಟಿ ಶಾಸಕರಾದ ಡಾ. ಚಂದ್ರು ಲಮಾಣಿ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್., ಉಪ ಅರಣ್ಯ ಸಂರಕ್ಷಣಾಧಿಕಾರಿ ಲೇಖರಾಜ್, ತಹಸೀಲ್ದಾರ ದನಂಜಯ ಸೇರಿದಂತೆ ಜಿಲ್ಲಾ ಮಟ್ಟದ, ತಾಲ್ಲೂಕು ಮಟ್ಟದ ಅಧಿಕಾರಿಗಳು, ಸಿಬ್ಬಂದಿಗಳು ಹಾಜರಿದ್ದರು.

### ಬಿಎಸ್‌ಎನ್‌ಎಲ್ ಹುಬ್ಬಳ್ಳಿ ವಿಭಾಗದ ಜನರಲ್ ಮ್ಯಾನೇಜರ್ ಧನಂಜಯಕುಮಾರ ತ್ರಿಪಾಠಿ ಮಾಹಿತಿ

# ಜಿಲ್ಲೆಯಾದ್ಯಂತ ಶೀಘ್ರವೇ 4ಜಿ ನೆಟ್‌ವರ್ಕ್

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಲ್ಲಿ ಈಗಾಗಲೇ ಸ್ವದೇಶಿ ತಂತ್ರಜ್ಞಾನ ಹೊಂದಿದ ಬಿಎಸ್‌ಎನ್‌ಎಲ್ 4ಜಿ ನೆಟ್‌ವರ್ಕ್ ಆರಂಭಿಸಲು ಪೂರಕ ಕೆಲಸಗಳು ನಡೆಯುತ್ತಿದ್ದು, ಕೆಲವೇ ತಿಂಗಳುಗಳಲ್ಲಿ 4ಜಿ ನೆಟ್‌ವರ್ಕ ಸೇವೆ ಕಾರ್ಯಾರಂಭಗೊಳ್ಳಲಿದೆ ಎಂದು ಬಿಎಸ್‌ಎನ್‌ಎಲ್ ಹುಬ್ಬಳ್ಳಿ ವಿಭಾಗದ ಜನರಲ್ ಮ್ಯಾನೇಜರ್ ಧನಂಜಯಕುಮಾರ ತ್ರಿಪಾಠಿ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಯಾವುದೇ ಖಾಸಗಿ ಕಂಪನಿಯ ನೆಟ್‌ವರ್ಕ್ ಸೌಲಭ್ಯಗಳಿಲ್ಲದ ಪ್ರದೇಶಗಳನ್ನು ಗುರುತಿಸಿ ಬಿಎಸ್‌ಎನ್‌ಎಲ್ ಸೇವೆ ತಲುಪಿಸುವ ಗುರಿ ಹೊಂದಲಾಗಿದೆ. ಈಗಾಗಲೇ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಹೊಸಳ್ಳಿ, ಗದಗ ತಾಲೂಕಿನ ಕಬಲಾಯತಕಟ್ಟಿ, ಗಜೇಂದ್ರಗಡದ ಹೊಸರಾಂಪೂರ, ಲಕ್ಷ್ಮೇಶ್ವರ ತಾಲೂಕಿನ ರಾಮಗಿರಿ ಬಳಿಯ ಬಸಾಪೂರ ಗ್ರಾಮದಲ್ಲಿ ಸೈಟ್ ವರ್ಕ್ ನಡೆಯುತ್ತಿದೆ ಎಂದರು.



ಸಹಾಯಕ ಜನರಲ್ ಮ್ಯಾನೇಜರ್ ಹುಚ್ಚಪ್ಪ ಶಿರಹಟ್ಟಿ ಮಾತನಾಡಿ, ಬಿಎಸ್‌ಎನ್‌ಎಲ್ 4ಜಿ ಸೇವೆ ಆರಂಭಿಸಲು ಆಸಕ್ತರಿರುವ ಗ್ರಾಹಕರು ಬಿಎಸ್‌ಎನ್‌ಎಲ್ ಸಂಬಂಧಿತ ಸೇವೆಗಳ ಮಾಹಿತಿ ಪಡೆಯಲು 1800-4444 ನಂಬರ್ ಬಳಸಿಕೊಂಡು ವಾಟ್ಸಾಪ್ ಮೆಸೆಜ್ ಮೂಲಕ ಸಂಪರ್ಕಿಸಬಹುದು. ಮೊಬೈಲ್ ಮೂಲಕವೇ ಬಿಎಸ್‌ಎನ್‌ಎಲ್ ಸೇವೆಗಳ ಮಾಹಿತಿ ನೀಡಲಾಗುವುದು ಎಂದು ಹೇಳಿದರು.

ಜಿಲ್ಲೆಯ ಪ್ರತಿ ಗ್ರಾಮಗಳಿಗೂ ಆಪ್ಟಿಕಲ್ ಫೈಬರ್ ಮೂಲಕ ಗ್ರಾಹಕರಿಗೆ ಹೊರೆಯಾಗದಂತೆ ಕಡಿಮೆ ಟ್ಯಾರಿಫ್ ದರದಲ್ಲಿ ಇಂಟರ್‌ನೆಟ್ ಸೌಲಭ್ಯ ಒದಗಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಜೊತೆಗೆ ಬಿಎಸ್‌ಎನ್‌ಎಲ್ ಗ್ರಾಹಕರಿಗೆ ಬ್ರಾಡ್‌ಬ್ಯಾಂಡ್ ಸೇವೆಗಳನ್ನು ಒದಗಿಸಲು ಮತ್ತು ನಿರ್ವಹಿಸಲು ಕಮಿಷನ್ ಆಧಾರದ ಮೇಲೆ ಫೈಬರ್ ಟು ದಿ ಹೋಮ್(ಎಫ್‌ಟಿಟಿಹೆಚ್) ಪಾಲುದಾರರದನ್ನು ನೇಮಕ ಮಾಡಿಕೊಳ್ಳುತ್ತಿದೆ. ಪಾಲುದಾರರಾಗಲು ಯಾವುದೇ ಸ್ಟಾರ್ಟಪ್‌ಗಳು, ಬಿಲ್ಡರ್‌ಗಳು, ಉದ್ಯಮಿಗಳು ಹಾಗೂ ವ್ಯಕ್ತಿಗಳು ಅರ್ಜಿ ಸಲ್ಲಿಸಬಹುದಾಗಿದೆ ಎಂದು ಹೇಳಿದರು.

ಗ್ರಾಮೀಣ ಪ್ರದೇಶಗಳಲ್ಲಿ ಸಂಪರ್ಕ ಕಡಿತಗೊಂಡಿರುವ ಗ್ರಾಹಕರ ಮರುಸ್ಥಾಪನೆಗೆ ವಿಶೇಷ ಗ್ರಾಮೀಣ ಯೋಜನೆಯನ್ನು ಲಾಂಚ್ ಮಾಡಲಾಗಿದ್ದು, ಅನಿಯಮಿತ ಡಾಟಾ ಮತ್ತು ಅನಿಯಮಿತ ಕರೆಗಳು, ಶೂನ್ಯ ಭದ್ರತಾ ಠೇವಣಿ ಮತ್ತು ಯಾವುದೇ ಅನುಸ್ಥಾಪನಾ ಶುಲ್ಕಗಳಿಲ್ಲದೇ ಸೇವೆ ಒದಗಿಸಲಾಗುತ್ತಿದೆ. ಈಗಾಗಲೇ ಗದಗ ಜಿಲ್ಲೆಯ ಬಹುತೇಕ ಗ್ರಾಮಗಳಲ್ಲಿ ಪಾಲುದಾರರನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಶೀಘ್ರದಲ್ಲೇ ಜಿಲ್ಲಾದ್ಯಂತ 4ಜಿ ನೆಟ್‌ವರ್ಕ್ ಸೇವೆ ಕಾರ್ಯಾರಂಭಗೊಳ್ಳಲಿದೆ. ಜೊತೆಗೆ ಅತ್ಯಂತ ಕಡಿಮೆ ಅವಧಿಯಲ್ಲಿ 5ಜಿ ನೆಟ್‌ವರ್ಕ್‌ಗೂ ಬದಲಾವಣೆಯಾಗಲಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಗದಗ ಗ್ರಾಮೀಣ ಎಸ್‌ಡಿಒಪಿ ಮೆಹಬೂಬ್ ಅಮರಗೋಳ, ಭಗತ್‌ಸಿಂಗ್ ಬಿ., ಶಂಕನಾಥ ಗೌಡ ಸೇರಿ ಬಿಎಸ್‌ಎನ್‌ಎಲ್ ಕಚೇರಿ ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

## ಪಾಲಕರ ಪಾದಪೂಜೆ ಸಂಸ್ಕಾರದ ಪ್ರತೀಕ



■ ವಿಜಯಸಾಕ್ಷಿ ಸುದ್ದಿ, ಗದಗ

ಮರೆಯಾಗುತ್ತಿರುವ ಪಾಲಕರು ಮತ್ತು ಮಕ್ಕಳ ನಡುವಿನ ಪ್ರೀತಿ, ಮಮತೆ ಹಾಗೂ ಬಾಂಧವ್ಯಗಳ ಬಗೆಗಿನ ಒಂದು ಸುಂದರ ಕಾರ್ಯಕ್ರಮವೇ ಪಾಲಕರ ಪಾದಪೂಜೆ. ವಿದ್ಯಾರ್ಥಿಗಳು ಪಠ್ಯಕ್ರಮದ ಅಭ್ಯಾಸದೊಂದಿಗೆ ಉತ್ತಮ ಸಂಸ್ಕೃತಿ, ಸಂಸ್ಕಾರ ಬೆಳೆಸಿಕೊಂಡು ಭವಿಷ್ಯ ಕಟ್ಟಿಕೊಳ್ಳಬೇಕು. ಅಕ್ಷರದೊಂದಿಗೆ ಉತ್ತಮ ಸಂಸ್ಕಾರವು ಮಕ್ಕಳಿಗೆ ದೊರೆಯಬೇಕು ಎಂದು ಜಿಲ್ಲಾ ಪಂಚಾಯತ್ ಮಾಜಿ ಉಪಾಧ್ಯಕ್ಷೆ ಶಕುಂತಲಾ ಬಾಯಿ ದಂಡಿನ ಹೇಳಿದರು.

ನಗರದ ಕೆವಿಎಸ್‌ಆರ್ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ತಾಯಂದಿರ ಸಭೆ ಮತ್ತು ತಾಯಂದಿರ ಪಾದಪೂಜೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ತಂದೆ-ತಾಯಂದಿರ ಪಾದಪೂಜೆ ಮಾಡಿ ಆಶೀರ್ವಾದ ಪಡೆದರು. ಪಾಲಕರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಪ್ರತಿಜ್ಞೆಯನ್ನು ಮಾಡಿದರು. ಪ್ರಾಚಾರ್ಯ ಯು.ಎಸ್. ಹಿರೇಮಠ, ಜಯಶ್ರೀ ಬೆನಕನವಾರಿ, ಮುಖ್ಯೋಪಾಧ್ಯಾಯ ಪಿ.ಟಿ. ಬಿಸನಳ್ಳಿ, ಬೋಧಕ-ಬೋಧಕೇತರ ಸಿಬ್ಬಂದಿ ವರ್ಗದವರು ಸೇರಿದಂತೆ ಪಾಲಕರು ಉಪಸ್ಥಿತರಿದ್ದರು.

ಜಾಸ್ಮಿನ್ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಶಿಕ್ಷಕ ಎಂ.ಕೆ. ಬೇವಿನಕಟ್ಟಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ನುಡಿಗಳನ್ನಾಡಿದರು. ಶಿಕ್ಷಕಿ ಎಸ್. ಎಸ್. ಮುಧೋಳ ಕಾರ್ಯಕ್ರಮ ನಿರೂಪಿಸಿದರು. ಎಂ.ಬಿ. ಹರ್ತಿ ವಂದಿಸಿದರು.

## ಮುಳಗುಂದ ಐತಿಹಾಸಿಕ ನೆಲೆಬೀಡು

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಮುಳಗುಂದ ಪಟ್ಟಣ ಐತಿಹಾಸಿಕ ನೆಲೆಬೀಡಾಗಿದೆ ಎಂದು ಲಕ್ಷ್ಮೇಶ್ವರ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಈಶ್ವರ ಮೆಡ್ಲೇರಿ ಹೇಳಿದರು.

ಅವರು ಪಟ್ಟಣದ ಬಾಲಲೀಲಾ ಮಾಹಾಂತ ಶಿವಯೋಗಿ ಶಿಕ್ಷಣ ಸಮಿತಿಯ ಬಿ.ಸಿ. ಬಂಗಾರಿ ಪೂರ್ವ ಪ್ರಾಥಮಿಕ ಹಾಗೂ ಅನುದಾನಿತ ಪ್ರಾಥಮಿಕ ಶಾಲೆಯ 2023/24ನೇ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಪ್ರತಿಭಾನ್ವಿತ ಮಕ್ಕಳಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಮುಳಗುಂದ ಪಟ್ಟಣ ಐತಿಹಾಸಿಕ ಪರಂಪರೆಯನ್ನು ಹೊಂದಿದ್ದು, ಈ ಪಟ್ಟಣದಲ್ಲಿ ರಾಷ್ಟ್ರಕೂಟ, ಗಂಗ, ಕಲ್ಯಾಣ, ಚಾಲುಕ್ಯ ಕಳಚುರಿ ಮತ್ತು ಹೊಯ್ಸಳ ಸಾಮ್ರಾಜ್ಯದ ಚಿಕ್ಕ ಮಂಡಳವಾಗಿತ್ತು. ಈಗ ಮತ್ತೆ ಅದೇ ಗತವೈಭವದಂತೆ ಶಿಕ್ಷಣ ಕ್ಷೇತ್ರದಲ್ಲಿ ಮುಳಗುಂದ ತನ್ನ ಛಾಪನ್ನು ಮೂಡಿಸುತ್ತಿದೆ. ಶರಣ ಸಂಸ್ಕೃತಿ, ಸಂಸ್ಕಾರ ಬೆಳೆಸಿ ನಾಡಿನಾದ್ಯಾಂತ ಉತ್ತಮ ಪ್ರಜೆಗಳನ್ನು ರೂಪಿಸಿದ ಕೀರ್ತಿ ಬಿ.ಸಿ. ಬಂಗಾರಿ ಶಾಲೆಗೆ ಸಲ್ಲುತ್ತದೆ ಎಂದರು.

ಎಸ್.ಸಿ. ಬಡ್ನಿ, ಪಿ.ಎ. ವಂಟಕರ, ಮಂಜುನಾಥ ಹೊಸಮನಿ, ಪ್ರಕಾಶ ಮದ್ದಿನ, ಎ.ಬಿ. ಬಡ್ನಿ, ಮುಖ್ಯಾಧ್ಯಾಪಕ ಎ.ಎಸ್. ಬೇಲೇರಿ ಮುಂತಾದವರಿದ್ದರು.

## ಚಿಕ್ಕನರಗುಂದದಲ್ಲಿ ಸಂವಿಧಾನ ಜಾಗೃತಿ ರಥ



■ ವಿಜಯಸಾಕ್ಷಿ ಸುದ್ದಿ, ನರಗುಂದ

ತಾಲೂಕಿನ ಚಿಕ್ಕನರಗುಂದ ಗ್ರಾಮದಲ್ಲಿ ಜಿಲ್ಲಾ ಪಂಚಾಯತ, ತಾಲೂಕು ಪಂಚಾಯತ ನರಗುಂದ ಹಾಗೂ ಸಮಾಜ ಕಲ್ಯಾಣ ಇಲಾಖೆ ಗದಗ ಇವರು ಹಮ್ಮಿಕೊಂಡ ಸಂವಿಧಾನ ಜಾಗೃತಿ ರಥಕ್ಕೆ ಗ್ರಾ.ಪಂ ಅಧ್ಯಕ್ಷೆ ಮಲ್ಲಮ್ಮ ಮರೆಣ್ಣವರ ಚಾಲನೆ ನೀಡಿದರು.

ಗ್ರಾ.ಪಂ ಸದಸ್ಯ ಶರಣಬಸಪ್ಪ ಹಳೇಮನಿ, ಸಮಾಜ ಕಲ್ಯಾಣ ಇಲಾಖೆಯ ನರಗುಂದ ಸಹಾಯಕ ನಿರ್ದೇಶಕ ಬಿ.ಎಮ್. ಬಬಡಿಗೇರ ಮಾತನಾಡಿದರು. ನಂತರ ಸಂವಿಧಾನ ಪೀಠಿಕೆ ವಾಚಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ಎಚ್.ಕೆ. ಅರಳಿಕಟ್ಟಿ, ಗ್ರಾ.ಪಂ ಉಪಾಧ್ಯಕ್ಷರಾದ ಈರಮ್ಮ ಮುದಿಗೌಡ್ರ, ಗ್ರಾ.ಪಂ ಮಾಜಿ ಅಧ್ಯಕ್ಷ ಮುತ್ತು ರಾಯರಡ್ಡಿ, ಸದಸ್ಯರಾದ ಜಡಿಯಪ್ಪಗೌಡ್ರ ಚನ್ನಪ್ಪಗೌಡ್ರ, ಶೋಭಾ ಕೋಣನ್ನವರ, ನಿರ್ಮಲಾ ತಳವಾರ, ಶಂಕ್ರಮ್ಮ ಚಲವಾದಿ, ಬಾಪು ಹಿರೇಗೌಡ್ರ, ಹೆಸ್ಕಾಮ್ ಎಇಇ ಎಚ್.ಎಮ್. ಖುದಾವಂದ್, ಕಾಲೇಜು ಪ್ರಾಚಾರ್ಯ ಎಸ್.ವ್ಹಿ. ದಂಡನಾಯ್ಕರ ಉಪಸ್ಥಿತರಿದ್ದರು. ಪಕ್ಕಿರೇಶ ಅಂಗಡಿ ಸಂವಿಧಾನ ಕುರಿತ ಜಾಗೃತಿ ಉಪನ್ಯಾಸ ನೀಡಿದರು. ಸೃಷ್ಟಿ ಕಲಾ ತಂಡದವರಿಂದ ಡಾ.ಅಂಬೇಡ್ಕರರ ಕ್ರಾಂತಿಗೀತೆ ಪ್ರಸ್ತುತಪಡಿಸಿದರು. ಬಿ.ಎಫ್. ಭೀಮಣ್ಣವರ ಕಾರ್ಯಕ್ರಮ ನಿರೂಪಿಸಿದರು.

## ಮನವಿಗೆ ಸ್ಪಂದಿಸಿ ಹೈಟೆಕ್ ಶೌಚಾಲಯ ನಿರ್ಮಾಣ



■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಶಾಬಾದಿ ಅವರ ಹೊಲದ ಬಳಿಯ ಖಾನತೋಟದಲ್ಲಿ ಸುಲಭ ಶೌಚಾಲಯ 5-6 ವರ್ಷಗಳಿಂದ ಪಾಳು ಬಿದ್ದಿತ್ತು. ಕ್ರಾಂತಿಸೇನಾ ಸಂಘಟನೆಯ ಅಧ್ಯಕ್ಷ ಬಾಬು ಬಾಕಳೆ ಗಮನಕ್ಕೆ ಬಂದಾಗ ಕಾರ್ಯಕರ್ತರ ಜೊತೆಗೂಡಿ, ಹಾಳು ಬಿದ್ದಿರುವ ಶೌಚಾಲಯವನ್ನು ತೆರವುಗೊಳಿಸಿ, ಹೊಸ ಶೌಚಾಲಯವನ್ನು ನಿರ್ಮಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕು ಎಂದು ಅಧಿಕಾರಿಗಳಲ್ಲಿ ವಿನಂತಿಸಿದ್ದರು.

ಕೂಡಲೇ ಎಚ್ಚೆತ್ತ ಅಧಿಕಾರಿಗಳು, ನಗರಸಭೆ ಸದಸ್ಯರು ಹಳೆಯ ಶೌಚಾಲಯವನ್ನು ತೆರವುಗೊಳಿಸಿ ಈಗ ಹೊಸದಾಗಿ ಹೈಟೆಕ್ ಶೌಚಾಲಯ ನಿರ್ಮಿಸಿ ಉದ್ಘಾಟಿಸಿರುವುದು ಈ ಭಾಗದ ಜನರಿಗೆ ತುಂಬಾ ಅನುಕೂಲವಾಗಿದೆ ಎಂದು ಕ್ರಾಂತಿ ಸೇನಾ ಗದಗ ಜಿಲ್ಲಾಧ್ಯಕ್ಷ ಬಾಬು ಬಾಕಳೆ, ಗೌ.ಕಾರ್ಯದರ್ಶಿ ಪ್ರವೀಣ್ ಹಬೀಬ ಹಾಗೂ ಪದಾಧಿಕಾರಿಗಳು ನಗರಸಭೆ ಅಧ್ಯಕ್ಷರು, ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಪತ್ರಿಕಾ ಪ್ರಕಟಣೆ ಮುಖಾಂತರ ಧನ್ಯವಾದಗಳನ್ನು ಸಲ್ಲಿಸಿದ್ದಾರೆ.

## ವಾರ್ಷಿಕ ಸ್ನೇಹ ಸಮ್ಮೇಳನ ನಾಳೆ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ಬಾಲಲೀಲಾ ಮಾಹಾಂತ ಶಿವಯೋಗಿಗಳ ಶಿಕ್ಷಣ ಸಮಿತಿಯ ಎಸ್.ಜೆ.ಜೆ.ಎಂ ಸಂಯುಕ್ತ ಪದವಿಪೂರ್ವ ಮಾಹಾವಿದ್ಯಾಲಯದ ವಾರ್ಷಿಕ ಸ್ನೇಹ ಸಮ್ಮೇಳನ ಫೆ.1ರಂದು ಬೆಳಿಗ್ಗೆ 10 ಗಂಟೆಗೆ ಬಾಲಲೀಲಾ ಮಾಹಾಂತ ಶಿವಯೋಗಿಗಳ ಕಲಾ ಭವನದಲ್ಲಿ ಜರಗಲಿದೆ.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಮುಳಗುಂದ ಗವಿಮಠದ ಡಾ.ಮಲ್ಲಿಕಾರ್ಜುನ ಮಾಹಾಸ್ವಾಮಿಗಳು, ಅಧ್ಯಕ್ಷತೆಯನ್ನು ಶಿಕ್ಷಣ ಸಮಿತಿ ಅಧ್ಯಕ್ಷ ಎಂ.ಡಿ. ಬಟ್ಟೂರ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಹುನಗುಂದ ನಿವೃತ್ತ ಶಿಕ್ಷಕ ಹಾಗೂ ಸಾಹಿತಿ ವಿಜಯಮಾಹಾಂತೇಶ ಎ.ಗದ್ದನಕೇರಿ, ಸಂಗನಬಸವ ಎಸ್. ಗದ್ದಿ ಭಾಗವಹಿಸುವರು ಎಂದು ಪ್ರಾಚಾರ್ಯ ಎ.ಎಂ. ಅಂಗಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### 'ಹುತಾತ್ಮ ದಿನ'ದ ಪ್ರಯುಕ್ತ ಸೌಹಾರ್ದ ಪರಂಪರೆ ಅಭಿಯಾನ

## ಸೌಹಾರ್ದತೆಗಾಗಿ ಕೈ ಜೋಡಿಸೋಣ



■ ವಿಜಯಸಾಕ್ಷಿ ಸುದ್ದಿ, ಗದಗ

ಮಹಾತ್ಮ ಗಾಂಧೀಜಿಯವರ ಹುತಾತ್ಮ ದಿನದ ಅಂಗವಾಗಿ ನಗರ ಗಾಂಧಿ ಸರ್ಕಲ್‌ನಲ್ಲಿ ಸೌಹಾರ್ದ ಕರ್ನಾಟಕ, ವಿವಿಧ ಪ್ರಗತಿಪರ ಸಂಘಟನೆಗಳು, ಸಮಾನ ಮನಸ್ಕರುಗಳ ಒಳಗೊಂಡ ಮಾನವ ಸರಪಳಿಯನ್ನು ರಚಿಸಲಾಯಿತು.

ಸಿಐಟಿಯುನ ಮಹೇಶ ಹಿರೇಮಠ ಮಾತನಾಡಿ, ಇಂದು ವಿವೇಕ-ಅವಿವೇಕ, ಸತ್ಯ-ಅಸತ್ಯ, ವಿಚಾರ-ವಿಕಾರಗಳ ನಡುವಿನ ಅಂತರ ಕಡಿಮೆಯಾಗುತ್ತಿದೆ. ಭಾರತಕ್ಕೆ ಬಹದೊಡ್ಡ ಸೌಹಾರ್ದ ಪರಂಪರೆಯಿದೆ. ಬಹುಸಂಸ್ಕೃತಿ, ಬಹುಭಾಷೆ ಮತ್ತು ಬಹು ಧರ್ಮಗಳ ಎಲ್ಲರೂ ಪರಸ್ಪರ ಸೌಹಾರ್ದದಿಂದ ಬದುಕುತ್ತ ಆರೋಗ್ಯಕರ ಸಮಾಜ ನಿರ್ಮಾಣ ಮಾಡಬೇಕೆಂಬ ಬದ್ಧತೆಯಿಂದ ಅನೇಕರು ಸಾಧಕರು ಶ್ರಮಿಸುತ್ತಿದ್ದಾರೆ. ಆದರೆ ಇತ್ತೀಚಿನ ಕೆಲವು ಅಹಿತಕರ ಘಟನೆಗಳು ನಮ್ಮ ಸೌಹಾರ್ದ ಸಂಸ್ಕೃತಿಗೆ ಧಕ್ಕೆ ತರುತ್ತಿವೆ. ದ್ವೇಷದ ದಾಹವನ್ನು ಹೆಚ್ಚಿಸುತ್ತಿವೆ ಎಂದರು.

ಶರೀಫ ಬಿಳೆಯಲಿ ಮಾತನಾಡಿ, ನಮ್ಮ ದೇಶಕ್ಕೆ ಸೌಹಾರ್ದತೆಯ ಗಟ್ಟಿ ಪರಂಪರೆಯಿದೆ. ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ಈ ಸೌಹಾರ್ದ ಪರಂಪರೆಯು ಸಂಕುಚಿತ ಸವಾಲುಗಳನ್ನು ಮೆಟ್ಟಿ ಮುಂದುವರೆಯುತ್ತ ಬಂದಿವೆ. ಇಂತಹ ಸಂವೇದನೆಗೆ ಧಕ್ಕೆ ತರಲು ಯಾವುದೇ ಧರ್ಮ ಮೂಲದವರು ಪ್ರಯತ್ನಿಸಿದರೂ ಅದನ್ನು ಕೆಲವು ಹಿತಾಸಕ್ತಿಗಳು ಧರ್ಮದ ಹೆಸರಿನಲ್ಲಿ ಜನಸಮುದಾಯದ ನಡುವೆ ಕಂದಕ ಮೂಡಿಸುತ್ತ ಕಲುಷಿತ ವಾತಾವರಣಕ್ಕೆ ಕಾರಣವಾಗುತ್ತಿರುವಾಗ, ಜನಸಮುದಾಯಕ್ಕೆ ಮನವರಿಕೆ ಮಾಡಿಕೊಡುವುದು ನಮ್ಮ ನೈತಿಕ ಜವಾಬ್ದಾರಿಯಾಗಿದೆ ಎಂದರು.

ಇಮ್ತಿಯಾಜ್ ಮಾನ್ವಿ ಮಾತನಾಡಿ, ಸ್ವತಂತ್ರ ಭಾರತದ ಮೊದಲ ಶಿಕ್ಷಣ ಸಚಿವರಾಗಿದ್ದ ಮೌಲಾನಾ ಅಬ್ದುಲ್ ಕಲಾಂ ಆಜಾದ್ ಅವರು ಅಖಂಡ ಭಾರತದ ಪ್ರತಿಪಾದಕರಾಗಿದ್ದರು. ಈ ಎಲ್ಲರ ವಿವೇಕದಲ್ಲಿ ಇರುವುದು ನಾವಿಂದು 'ಜಾತ್ಯಾತೀತ' ವೆಂದು ಕರೆಯುತ್ತಿರುವ ಪರಿಕಲ್ಪನೆಯ ಸಾರವೇ ಆಗಿದೆ ಎಂದರು.

ಕಾರ್ಯಕ್ರಮದಲ್ಲಿ ನಾಗರತ್ನ ಬಡಿಗಣ್ಣವರ, ವಿಜಯಲಕ್ಷ್ಮೀ ಚಲವಾದಿ, ನೀಲಾ ಬಾರಕೇರ, ರತ್ನಾ ದೊಡಗುಂಟಿ, ನಾಗರತ್ನ ದೊಡಗುಂಟಿ, ಶ್ರೀದೇವಿ ಅಣ್ಣಿಗೇರಿ, ಸಾವಿತ್ರಿ, ನಾಗಮ್ಮ ಸಾಗರ, ರಮೇಶ ಕೋಳೂರ, ವಿರುಪಾಕ್ಷ ರಾಮಗಿರಿ, ಅನಸೂಯಾ ಭಾವಿಕಟ್ಟಿ, ಮಮತಾ ಇಳಕಲ್ಲ ಉಪಸ್ಥಿತರಿದ್ದರು.

### ಅಖಿಲ ಕರ್ನಾಟಕ ಸಾಂಸ್ಕೃತಿಕ ಸಮ್ಮೇಳನದಲ್ಲಿ ಶರಣಬಸವೇಶ್ವರ ಶ್ರೀಗಳು

# ಸಾಧಕರನ್ನು ಗುರುತಿಸುವ ಕಾರ್ಯವಾಗಲಿ

■ ವಿಜಯಸಾಕ್ಷಿ ಸುದ್ದಿ, ಚಿತ್ರದುರ್ಗ

ಎಲೆಮರೆಯ ಕಾಯಿಯಂತಿರುವ ಸಾಧಕರನ್ನು ಹುಡುಕಿ ಗುರುತಿಸಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸುವ ಕುಕನೂರಿನ ಕನ್ನಡ ಸಾಹಿತ್ಯ ಹಾಗೂ ಅಭಿವೃದ್ಧಿ ಟ್ರಸ್ಟ್‌ನ ಕಾರ್ಯ ಶ್ಲಾಘನೀಯವಾಗಿದೆ ಎಂದು ಗಜೇಂದ್ರಗಡದ ಸಂಸ್ಥಾನ ಕೋಡಿಮಠದ ತಳ್ಳಿಹಾಲ ಡಾ. ಶ್ರೀ ಶರಣಬಸವೇಶ್ವರ ಮಹಾ ಸ್ವಾಮೀಜಿ ಹೇಳಿದರು.

ಚಿತ್ರದುರ್ಗದ ಪತ್ರಿಕಾ ಭವನದಲ್ಲಿ ನಡೆದ ಅಖಿಲ ಕರ್ನಾಟಕ ಸಾಂಸ್ಕೃತಿಕ ಸಮ್ಮೇಳನದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ನೈಜ ಪ್ರತಿಭೆಯನ್ನು ಗುರುತಿಸುವಲ್ಲಿ ಹಲವರು ವಿಫಲರಾಗುತ್ತಿದ್ದಾರೆ. ಆದರೆ ಕುಕನೂರಿನ ಕನ್ನಡ ಸಾಹಿತ್ಯ ಹಾಗೂ ಅಭಿವೃದ್ಧಿ ಟ್ರಸ್ಟ್ ಇಂಥ ಸಾಕಷ್ಟು ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಸೂಕ್ತ ವೇದಿಕೆ ಕಲ್ಪಿಸಿಕೊಡುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ಕನ್ನಡ ನಾಡು, ಕಲೆ, ಸಂಸ್ಕೃತಿ ಉಳಿಸುವಲ್ಲಿ ಇಂಥ ಸಮ್ಮೇಳನಗಳು ಅವಶ್ಯ ಎಂದರು.

ಇತಿಹಾಸ ಸಂಶೋಧಕ ಡಾ. ಬಿ. ರಾಜಶೇಖರಪ್ಪ ಚಿತ್ರದುರ್ಗದ ಐತಿಹಾಸಿಕ ಹಿನ್ನೆಲೆ, ಸಾಂಸ್ಕೃತಿಕ, ಸಾಹಿತ್ಯ ನೆಲೆಗಟ್ಟುಗಳು ಎಂಬ ವಿಷಯದ ವಿಚಾರಗೋಷ್ಠಿಯಲ್ಲಿ ಉಪನ್ಯಾಸ ನೀಡಿದರು. ಸಮ್ಮೇಳನದ ಸರ್ವಾಧ್ಯಕ್ಷೆ ಸತ್ಯಪ್ರಭಾ ಇತ್ತೀಚಿನ ಸಾಹಿತ್ಯ ಸಂಘಟನೆಗಳ ಕುರಿತು ಮಾತನಾಡಿದರು.



ಈ ಸಂದರ್ಭದಲ್ಲಿ ವೈಷ್ಣವಿ ಜೋಷಿ ಇವರಿಂದ ಭರತನಾಟ್ಯ, ಕುಕನೂರಿನ ಮುರಾರಿ ಭಜಂತ್ರಿಯವರಿಂದ ಸುಗಮ ಸಂಗೀತ, ದೇವಪ್ಪ ಹರಿಜನ ಅವರಿಂದ ಜನಪದ ಗಾಯನ, ವೀರಭದ್ರಪ್ಪ ಸುಂಕದ ಬೆದವಟ್ಟಿ ಅವರಿಂದ ವಚನ ಸಂಗೀತ, ಅಕ್ಕ ಮಹಾದೇವಿ ಸೂರತಾನಿ ಅವರಿಂದ ಜನಪದ ಗಾಯನ ಜರುಗಿತು. ಹುಬ್ಬಳ್ಳಿಯ ದುರ್ಗಾ ಭಜನಾ ಮಂಡಳಿಯಿಂದ ಕೋಲಾಟ ಹಾಗೂ ಭಜನಾ ಪದಗಳು ನಡೆದವು. ಶ್ರೀ ಗಂಗಾಧರ ಅವರಿಂದ ಜನಪದ ಗಾಯನ ನಡೆಯಿತು.

ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ರಮೇಶ್ ಸುರ್ವೆ, ಪರಶುರಾಮ ಗೊರಪ್ಪರ್, ಎಂ.ಎಚ್. ಉಜ್ಜಮ್ಮನವರ್, ದಯಾ ಪುತ್ತೂರಕರ್, ಕೊರ್ಲಕುಂಟೆ ತಿಪ್ಪೇಸ್ವಾಮಿ, ಶರಣಪ್ಪ ಕೊಪ್ಪದ, ಎಫ್.ಎಂ. ಕಳ್ಳಿ, ಶರಣೇಗೌಡ ಯರದೊಡ್ಡಿ, ಶಶಿಕುಮಾರ್ ಎಂ.ಎ, ಬಸವರಾಜ ಕೊಳ್ಳಿ ಉಪಸ್ಥಿತರಿದ್ದರು.

ನಂತರ ನಡೆದ ಚುಟುಕು ಕವಿಗೋಷ್ಠಿಗೆ ಮೈಸೂರಿನ ಸಾಹಿತಿ ಶಶಿಕುಮಾರ್.ಎಂ ಚಾಲನೆ ನೀಡಿದರು. ಅಧ್ಯಕ್ಷತೆಯನ್ನು ಪತ್ರಕರ್ತ ಎಚ್.ಆರ್. ವಸ್ತ್ರದ ವಹಿಸಿದ್ದರು. ಕನ್ನಡ ಹೋರಾಟಗಾರ ಶಂಕರ ಹೂಗಾರ ಸಮಾರೋಪ ನುಡಿಗಳನ್ನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಎಂ.ಬಿ. ಅಳವಂಡಿ ವಹಿಸಿದ್ದರು.

ಈ ಸಂದರ್ಭದಲ್ಲಿ ಟ್ರಸ್ಟ್ ಅಧ್ಯಕ್ಷ ರುದ್ರಪ್ಪ ಭಂಡಾರಿ, ಚಿತ್ರದುರ್ಗದ ಚಿನ್ಮೂಲಾದ್ರಿ ಸಾಹಿತ್ಯ ವೇದಿಕೆ ಅಧ್ಯಕ್ಷ ಡಾ. ಎಸ್.ಎಚ್. ಶಫೀವುಲ್ಲಾ, ಸಹ ಕಾರ್ಯದರ್ಶಿ ಎಚ್.ಸತೀಶ್ ಕುಮಾರ್ ಇದ್ದರು. ಸಿ.ಎನ್. ಭಾಗ್ಯಲಕ್ಷ್ಮೀ, ಪ್ರವೀಣ ಬೆಳಗೆರೆ, ಅರ್.ಜಿ. ವಿನಾಯಕ ಹಾಗೂ ಶೋಭಾ ಮಲ್ಲಿಕಾರ್ಜುನ ನಿರೂಪಿಸಿದರು.

# ಹೆಣ್ಣು ಮಗುವಿನ ಕುರಿತ ಮನಸ್ಥಿತಿ ಬದಲಾಗಲಿ



■ವಿಜಯಸಾಕ್ಷಿ ಸುದ್ದಿ, ಗದಗ

ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಹೆಣ್ಣು ಮುಖ್ಯ ಪಾತ್ರ ವಹಿಸುತ್ತಾಳೆ. ಆದರೆ ಅವಳ ಯಾವುದೇ ರೂಪದ ಮೂಲ ತಾಯಿ ಹೃದಯವೇ ಆಗಿರುತ್ತದೆ. ಅಂತಹ ಹೆಣ್ಣು ಸಂತಾನವನ್ನು ನಮ್ಮ ಬುದ್ಧಿ ಹೀನತೆಯಿಂದ ಅತ್ಯಾಚಾರ, ಅನಾಚಾರಗಳ ಮೂಲಕ ನಶಿಸಿಹೋಗುವಂತೆ ಮಾಡುತ್ತಿರುವುದು ಖೇದಕರ ಸಂಗತಿಯಾಗಿದೆ ಎಂದು ಚರ್ಮರೋಗ ವೈದ್ಯರಾದ ಡಾ. ಸರೋಜ ಪಾಟೀಲ ಅಭಿಪ್ರಾಯಪಟ್ಟರು.

ಅವರು ತೋಂಟದಾರ್ಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಹೆಣ್ಣುಮಗು ದಿನಾಚರಣೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಕಾರ್ಯಕ್ರಮದ ಸಂಚಾಲಕಿ ಡಾ. ಶೈಲಜಾ ಮುದೇನಗುಡಿ ಮಾತನಾಡಿ, ಹೆಣ್ಣು ಮಗು ಯಾವುದೇ ರೀತಿಯಲ್ಲಿ ಕುಟುಂಬಕ್ಕೆ ಹೊರೆಯಲ್ಲ. ತಂದೆ-ತಾಯಿಗಳು ಅವಳಿಗೆ ಬೇಕಾದ ಶಿಕ್ಷಣ-ಆರ್ಥಿಕ ಭದ್ರತೆಯನ್ನು ಪಡೆದುಕೊಳ್ಳುವಲ್ಲಿ ಮಾರ್ಗದರ್ಶಿಗಳಾಗಿ ನಿಂತರೆ ಅವಳ ಸಾಧನೆ ದೇಶಕ್ಕೆ ಉತ್ತಮ ಭವಿಷ್ಯವನ್ನು ಕಟ್ಟಿಕೊಡುತ್ತದೆ ಎಂದರು.

ಕಾರ್ಯಕ್ರಮವನ್ನುದ್ದೇಶಿಸಿ ಡಾ. ರಶ್ಮಿ ಅಂಗಡಿ, ಡಾ. ಶರ್ವಾಣಿ ಜಿ.ಎಸ್ ಮಾತನಾಡಿದರು. ಡಾ. ಅಶ್ವಿನಿ ಅರಳಿ, ಪ್ರೊ. ನೀತಾ ಮುದರಡ್ಡಿ, ಪ್ರೊ. ಮುಕ್ತಾ ಪಾಟೀಲ, ಪ್ರೊ. ವಿನಯಾ ಇಸರಣ್ಣವರ, ಪ್ರೊ. ತೃಪ್ತಿ ಕುರಡಗಿ, ಪ್ರೊ. ಸಾಧಿಕಾ, ಪ್ರೊ. ಪ್ರೇಮಾ ಯಲ್ಲೂರ, ಪ್ರೊ. ಸುಜಾತ ಬೆಟಗೇರಿ, ಪ್ರೊ. ತನುಶ್ರೀ, ಪ್ರೊ. ಸೌಮ್ಯ, ಪ್ರೊ. ಕಾವ್ಯ, ಪ್ರಿಯಾ ಮಿಣಜಗಿ, ಪ್ರೊ. ರೇಖಾ ಸಿದ್ನೆಕೊಪ್ಪ, ಪ್ರೊ. ಉಜಮಾ ಹಾಜರಿದ್ದರು. ರಂಜಿತಾ ಪ್ರಾರ್ಥಿಸಿದರು. ಸಂಜನಾ ಹುದ್ದಾರ ನಿರೂಪಿಸಿದರು, ಕುಮಾರಿ ಶ್ರೇಯಾ ಬುಳ್ಳಾ ವಂದಿಸಿದರು.

### ಸೌಹಾರ್ದತಾ ಮಾನವ ಸರಪಳಿ ನಿರ್ಮಾಣ ಕಾರ್ಯಕ್ರಮದಲ್ಲಿ ವಿಜಯಮಹಾಂತ ಶ್ರೀಗಳು

# ನಾಯಕರ ಆದರ್ಶಗಳನ್ನು ಮೈಗೂಡಿಸಿಕೊಳ್ಳಿ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಜಾತ್ಯಾತೀತರಾಗಿ ಮಾನವರೆಲ್ಲರೂ ಒಂದಾಗುವ ಮೂಲಕ ಸರ್ವಜನಾಂಗದ ಶಾಂತಿಯ ತೋಟವನ್ನು ಕಟ್ಟಲು ಮುಂದಾಗೋಣ ಎಂದು ಮೈಸೂರ ಮಠದ ವಿಜಯಮಹಾಂತ ಸ್ವಾಮೀಜಿ ಹೇಳಿದರು.

ಮಹಾತ್ಮ ಗಾಂಧಿ ಹುತಾತ್ಮ ದಿನದ ಅಂಗವಾಗಿ ರಾಜ್ಯವ್ಯಾಪಿ ಸೌಹಾರ್ದತೆ, ಪರಂಪರೆ ಉಳಿಸುವ-ಬೆಳೆಸುವ ಅಭಿಯಾನ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಪಟ್ಟಣದ ಕೆ.ಕೆ. ವೃತ್ತದಲ್ಲಿ ಸೌಹಾರ್ದ ಕರ್ನಾಟಕ, ವಿವಿಧ ಪ್ರಗತಿಪರ, ಸಮಾನ ಮನಸ್ಕರು ಹಾಗೂ ಜನಪರ ಸಂಘಟನೆಗಳಿಂದ ಮಂಗಳವಾರ ನಡೆದ ಸೌಹಾರ್ದತಾ ಮಾನವ ಸರಪಳಿ ನಿರ್ಮಾಣ ಕಾರ್ಯಕ್ರಮದಲ್ಲಿ ಶ್ರೀಗಳು ಮಾತನಾಡಿದರು.

ಭಗತ್ ಸಿಂಗ್, ಕಿತ್ತೂರ ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ ಮುಂತಾದವರು ದೇಶಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದರು. ಸಬಕೋ ಸನ್ಮತಿ ದೇ ಭಗವಾನ್ ಎಂದು ರಾಮನ ಭಜನೆಯೊಂದಿಗೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುತ್ತಿದ್ದ ಮಹಾತ್ಮ ಗಾಂಧಿಜೀ ಅವರಿಗೆ ಯಾರೋ ಒಬ್ಬ ಪಾಪಿ ಗುಂಡು ಹಾರಿಸಿದ. ದೇಶಕ್ಕಾಗಿ ತ್ಯಾಗ ಮಾಡಿದ ಗಾಂಧೀಜಿ ಅವರ ಸ್ಮರಣೆಯೊಂದಿಗೆ ಮಹಾನ್ ನಾಯಕರ ಆದರ್ಶಗಳನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದರು.




> ರಾಜವಾಡೆಯ ಯಶರಾಜ್ ಘೋರ್ಪಡೆ ಮಾತನಾಡಿ, ನಮ್ಮ ಊರಿನಂತೆ ದೇಶದಲ್ಲಿ ಮತ್ತೊಂದು ಊರಿಲ್ಲ ಎನ್ನುವ ಹೆಮ್ಮೆ ನಮಗಿದೆ. ಇಂತಹ ಭವ್ಯವಾದ ಇತಿಹಾಸ ಹಾಗೂ ಸಂಪ್ರದಾಯದ ಛತ್ರಪತಿ ಶಾಹುಮಹಾರಾಜ ಪ್ರಥಮ ಮೀಸಲಾತಿ ಜಾರಿ ತಂದವರು. ನಮ್ಮ ಪೂರ್ವಜರು ಹಾಕಿಕೊಟ್ಟ ಮಾರ್ಗ ಮತ್ತು ಅವರ ಆದರ್ಶಗಳು ನಮಗೆ ಪ್ರೇರಣೆಯಾಗಿದ್ದು, ಸೌಹಾರ್ದ ಭಾರತ ನಿರ್ಮಾಣಕ್ಕೆ ನಾವೆಲ್ಲರೂ ಮುಂದಾಗಬೇಕು ಎಂದರು.

ಟಕ್ಕೇದ ದರ್ಗಾದ ಹಜರತ್ ಸೈಯದ್ ನಿಜಾಮುದ್ದೀನ್ ಶಾ ಅಶ್ರಫಿ ಮಾತನಾಡಿ, ನಾವೆಲ್ಲ ಒಂದೇ ಎನ್ನುವ ಮನೋಭಾವ ಎಲ್ಲರಲ್ಲಿಯೂ ಮೂಡಬೇಕಿದೆ. ಮನುಷ್ಯನಿಗೆ ಬೆಲೆ ಇಲ್ಲ, ಮನುಷ್ಯತ್ವಕ್ಕೆ ಬೆಲೆ ಇದೆ. ಸರ್ವ ಜನಾಂಗದ ತೋಟದಲ್ಲಿ ಎಲ್ಲರೂ ಒಗಟ್ಟಿನಿಂದ ಬಾಳಿದರೆ ಹೂದೋಟ ಸುಂದರವಾಗಿ ಕಾಣಲಿದೆ ಎಂದರು.

ಫಾದರ್ ಜೋಸೆಫ್ ಮಾತನಾಡಿ, ನಾವು ಎಲ್ಲರೂ ಒಂದು ಎನ್ನುವ ಮನೋಭಾವನೆ ನಮ್ಮನ್ನು ಮತ್ತಷ್ಟು ಬಲಿಷ್ಠಗೊಳಿಸಲಿದೆ. ಹೀಗಾಗಿ ನಾವೆಲ್ಲರೂ ಒಂದು ಎಂಬ ಭಾವನೆಯಿಂದ ಸಾಗುವ ಮೂಲಕ ದೇಶದ ಅಭಿವೃದ್ಧಿಗೆ ಶ್ರಮಿಸೋಣ ಎಂದರು.

ಈ ಸಂದರ್ಭದಲ್ಲಿ ನಿವೃತ್ತ ಉಪನ್ಯಾಸಕ ಬಿ.ಎ. ಕೆಂಚರೆಡ್ಡಿ, ವಕೀಲ ಎಂ.ಎಸ್. ಹಡಪದ, ಎ.ಡಿ. ಕೋಲಕಾರ, ಮಾರುತಿ ಚಿಟಗಿ, ರಾಜು ಸಾಂಗ್ಲೀಕರ, ಬಾಲು ರಾಠೋಡ, ಗಣೇಶ ರಾಠೋಡ, ಹಸನಸಾಬ ತಟಗಾರ, ಕಳಕಯ್ಯ ಸಾಲಿಮಠ, ನಾಸಿರಅಲಿ ಸುರಪುರ, ಉಮೇಶ ರಾಠೋಡ, ಶರಣು ಪೂಜಾರ, ಬಸವರಾಜ ಹೊಸಮನಿ, ಚಂದ್ರು ರಾಠೋಡ ಮುಂತಾದವರಿದ್ದರು.

### ಗದಗ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ರಾಷ್ಟ್ರೀಯ ಸ್ವಚ್ಛತಾ ಕಾರ್ಯಕ್ರಮ

# ಸ್ವಚ್ಛತೆಗೆ ಪ್ರಥಮ ಆದ್ಯತೆ ನೀಡಿ

■ವಿಜಯಸಾಕ್ಷಿ ಸುದ್ದಿ, ಗದಗ

ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್‌ನ್ನು ತ್ಯಜಿಸುವ ಮೂಲಕ ಉತ್ತಮ ಪರಿಸರ ನಿರ್ಮಾಣ ಮಾಡುವಲ್ಲಿ ಕೈಜೋಡಿಸಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಸವರಾಜ ನುಡಿದರು.



ಅವರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯಾಂಗ, ಜಿಲ್ಲಾಡಳಿತ, ಜಿಲ್ಲಾ ವಕೀಲರ ಸಂಘ ಹಾಗೂ ಗದಗ-ಬೆಟಗೇರಿ ನಗರಸಭೆಯ ಸಂಯುಕ್ತಾಶ್ರಯದಲ್ಲಿ ಗದಗ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಮಹಾತ್ಮ ಗಾಂಧೀಜಿ ಪುಣ್ಯತಿಥಿ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಸ್ವಚ್ಛತಾ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸಾರ್ವಜನಿಕ ಸ್ಥಳಗಳು, ಶಾಲಾ-ಕಾಲೇಜುಗಳು, ಸರ್ಕಾರಿ ಕಛೇರಿಗಳು, ಉದ್ಯಾನವನಗಳಲ್ಲಿ ಸಾರ್ವಜನಿಕರು ಹಾಗೂ ಸಂಬಂಧಪಟ್ಟ ಇಲಾಖೆಯವರು ಸ್ವಚ್ಛತೆಗೆ ಪ್ರಥಮ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರ. ಎಸ್ ಶೆಟ್ಟಿ, 1ನೇ ಹೆಚ್ಚುವರಿ ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾದ ಖಾದರಸಾಬ.ಎಚ್ ಬೆನಕಟ್ಟಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ನ್ಯಾ. ಕೆ.ಗುರುಪ್ರಸಾದ, ಅಪರ ಹಿರಿಯ ದಿವಾಣಿ ನ್ಯಾಯಾಧೀಶರಾದ ಪ್ರಕಾಶ.ಸಿ ಕುರುಬೆಟ್, ಪ್ರಧಾನ ದಿವಾಣಿ ನ್ಯಾಯಾಧೀಶರಾದ ಅರುಣ ಚೌಗಲೆ, ಜೆಎಂಎಫ್‌ಸಿ 2ನೇ ನ್ಯಾಯಾಲಯದ ದಿವಾಣಿ ನ್ಯಾಯಾಧೀಶರಾದ ಬೀರಪ್ಪ ಕಾಂಬಳೆ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಎಂ.ಐ. ಹಿರೇಮನಿ ಪಾಟೀಲ, ಉಪಾಧ್ಯಕ್ಷರಾದ ಎ.ಎಂ. ಹದ್ಲಿ, ಪ್ರಧಾನ ಕಾರ್ಯದರ್ಶಿ ಬಿ.ಎಚ್. ಮಾಡಲಗೇರಿ, ಜಂಟಿ ಕಾರ್ಯದರ್ಶಿ ಪಿ.ಬಿ. ಕಣಗಿನಹಾಳ, ಖಜಾಂಚಿ ವಿ.ಎಚ್. ಮೇರವಾಡೆ ಹಾಗೂ ಗದಗ ಬೆಟಗೇರಿ ನಗರಸಭೆಯ ಸದಸ್ಯ ಅನಿಲ ಅಬ್ಬಿಗೇರಿ, ನಗರಸಭೆ ಸಹಾಯಕ ಕಾರ್ಯನಿರ್ವಾಹ ಅಭಿಯಂತರರು (ಪರಿಸರ) ಆನಂದ ಬದಿ, ಆರೋಗ್ಯಾಧಿಕಾರಿ ಎಂ.ಎಂ. ಮಕಾನದಾರ, ಚಂದ್ರು, ಷಣ್ಮುಖ, ಪೌರಕಾರ್ಮಿಕರು ಹಾಗೂ ನ್ಯಾಯಾಲಯ ಸಿಬ್ಬಂದಿಗಳು ಸ್ವಚ್ಛತಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಸಂವಿಧಾನದ ಆಶಯಗಳಿಗೆ ಬದ್ಧರಾಗಿ



■ವಿಜಯಸಾಕ್ಷಿ ಸುದ್ದಿ, ಗದಗ

ಎಲ್ಲ ಜಾತಿ, ವರ್ಗದ ಜನರೂ ಸಂವಿಧಾನದ ಆಶಯಗಳಿಗೆ ಬದ್ಧರಾಗಿರಬೇಕು. ಅಂದಾಗ ಮಾತ್ರ ಅಸ್ಪೃಶ್ಯತೆ ತೊಲಗಲು ಸಾಧ್ಯ ಎಂದು ಎಸ್ಸಿ-ಎಸ್ಟಿ ದೌರ್ಜನ್ಯ ನಿಯಂತ್ರಣ ಪ್ರತಿಬಂಧಕ ಕಾಯ್ದೆ 1989ರ ಗದಗ ಜಿಲ್ಲಾ ಜಾಗೃತ ಹಾಗೂ ಉಸ್ತುವಾರಿ ಸಮಿತಿ ಸದಸ್ಯ ಸುರೇಶ ಚಲವಾದಿ ಹೇಳಿದರು.

ಜಿಲ್ಲಾ ಪಂಚಾಯತ್, ತಾಲೂಕಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಗ್ರಾಮ ಪಂಚಾಯಿತಿ ಕದಡಿ ಹಾಗೂ ವಿವಿಧ ದಲಿತಪರ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಕದಡಿ ಗ್ರಾಮದಲ್ಲಿ ಎಸ್ಸಿ ಎಸ್ಟಿ ದೌರ್ಜನ್ಯ ಪ್ರತಿಬಂಧಕ ಕಾಯ್ದೆ 1989ರ ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತದ ಪ್ರತಿಯೊಬ್ಬ ಪ್ರಜೆಗೂ ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ಬದುಕಲು ಸಮಾನ ಅವಕಾಶವನ್ನು ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ನೀಡಿದ್ದಾರೆ. ಅದರ ಭಾಗವಾಗಿ ಪ್ರಜ್ಞಾವಂತ ನಾಗರಿಕ ಬಂಧುಗಳು ಸಂವಿಧಾನದ ಆಶಯಗಳಿಗೆ ಬದ್ಧರಾಗಿ ಸಾಮರಸ್ಯದ ಬದುಕನ್ನು ಕಟ್ಟಿಕೊಳ್ಳಬೇಕು. ಅಂದಾಗ ಮಾತ್ರ ಸಮಾಜದಲ್ಲಿ ಶಾಂತಿ ನೆಲೆಸಲು ಸಾಧ್ಯ ಎಂದರು.

ತಾಲೂಕಾ ಸಮಾಜ ಕಲ್ಯಾಣಾಧಿಕಾರಿ ವಿಜಯಲಕ್ಷ್ಮೀ ಇಂಗಳಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿ, ಗ್ರಾಮೀಣ ಪ್ರದೇಶದ ಕೆಲವು ಗ್ರಾಮಗಳಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತವಿರುವದು ನೋವಿನ ಸಂಗತಿ. ಇಂತಹ ಪ್ರಕರಣಗಳನ್ನು ಹೋಗಲಾಡಿಸಲು ಇಲಾಖೆ ಶ್ರಮಿಸುತ್ತಿದೆ. ಶೋಷಿತರ ಪರವಾಗಿ ನಮ್ಮ ಇಲಾಖೆ ಹಾಗೂ ನಮ್ಮ ಮೇಲಾಧಿಕಾರಿಗಳು ಸದಾಕಾಲ ಶ್ರಮಿಸುತ್ತೇವೆ ಎಂದರು.

ಜೇನುಗೂಡು ಕಲಾ ತಂಡ ಹಾಗೂ ಪೃಥ್ವಿಪ್ರಿಯಾ ಸಾರ್ವತ್ರಿಕ ಸೇವಾ ಸಂಸ್ಥೆಯವರು ಕ್ರಾಂತಿಗೀತೆ ಹಾಗೂ ಬೀದಿ ನಾಟಕ ಪ್ರದರ್ಶನದೊಂದಿಗೆ ಜಾಗೃತಿ ಮೂಡಿಸಿದರು. ನ್ಯಾಯವಾದಿ ಸಂಶಿಯವರು ಅಸ್ಪೃಶ್ಯತೆಯ ಮಾನದಂಡಗಳ ಕುರಿತು ಕಾನೂನು ತಿಳುವಳಿಕೆ ನೀಡಿದರು. ಈ ಸಂದರ್ಭದಲ್ಲಿ ಡಿವೈಎಸ್ಪಿ ಗದಗ, ತಹಸೀಲ್ದಾರ್ ಗದಗ, ಸಮಾಜ ಕಲ್ಯಾಣ ಇಲಾಖೆಯ ಅಧೀಕ್ಷಕಿ ಮಂಜುಳಾ, ತಾ.ಪಂ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿಗಳು ಮುಂತಾದವರಿದ್ದರು.

### ಕೇಳಿದ ಹಣಕ್ಕಿಂತ ಹೆಚ್ಚುವರಿ ಹಣ ಡ್ರಾ ಮಾಡುತ್ತಿದ್ದ ಆರೋಪ

# ಪೋಸ್ಟ್‌ಮ್ಯಾನ್ ವಿರುದ್ಧ ಗ್ರಾಹಕರ ದೂರು

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಪಟ್ಟಣದ ಅಂಚೆ ಕಚೇರಿಯಲ್ಲಿ ಗ್ರಾಹಕರಿಗೆ ವಂಚನೆ ಮಾಡಲಾಗುತ್ತಿದೆ ಎಂದು ಆರೋಪಿಸಿ ಕೆಲ ಗ್ರಾಹಕರು ಪೋಸ್ಟ್‌ಮ್ಯಾನ್‌ರನ್ನು ತರಾಟೆಗೆ ತೆಗೆದುಕೊಂಡು ಪ್ರತಿಭಟಿಸಿದ ಘಟನೆ ಮಂಗಳವಾರ ನಡೆಯಿತು.



ಗ್ರಾಹಕರು ಅಂಚೆ ಕಚೇರಿಗಳಲ್ಲಿ ಖಾತೆಗಳನ್ನು ತೆರೆದು ವ್ಯವಹಾರ ನಡೆಸುತ್ತಿದ್ದು, ಗೃಹಲಕ್ಷ್ಮೀ ಸೇರಿ ಸರ್ಕಾರದ ವಿವಿಧ ಯೋಜನೆಗಳ ಹಣ ನೇರವಾಗಿ ಅಂಚೆ ಕಚೇರಿಯಲ್ಲಿನ ಗ್ರಾಹಕರ ಖಾತೆಗಳಿಗೆ ಜಮೆ ಆಗುತ್ತಿದೆ. ಖಾತೆಗಳಿಗೆ ಜಮೆಯಾದ ಹಣವನ್ನು ಡ್ರಾ ಮಾಡಲು ತೆರಳುವ ಮಹಿಳೆಯರು ಹಾಗೂ ಗ್ರಾಹಕರು ಹೇಳಿದ ಹಣಕಿಂತ ರೂ.100ರಿಂದ 200 ರೂ. ರವರೆಗೆ ಹೆಚ್ಚಿಗೆ ಡ್ರಾ ಮಾಡುವ ಪೋಸ್ಟ್‌ಮ್ಯಾನ್ ಗ್ರಾಹಕರಿಗೆ ಅವರು ಹೇಳಿದ ಹಣವನ್ನು ಡ್ರಾ ಮಾಡಿದ್ದೇನೆ ಎಂದು ಹೇಳಿ ವಂಚನೆ ಮಾಡುತ್ತಿದ್ದಾನೆ ಎಂದು ಗ್ರಾಹಕರು ದೂರಿದರು.

ಅಂಚೆ ಕಚೇರಿಯಲ್ಲಿ ಹಣ ಡ್ರಾ ಮಾಡಿದ ಬಳಿಕ ಮನೆಗೆ ತೆರಳಿದ ಗ್ರಾಹಕರ ಮನೆಯಲ್ಲಿ ಮೊಬೈಲ್‌ಗೆ ಬಂದ ಸಂದೇಶ ಪರಿಶೀಲಿಸಿದಾಗ ಈ ವ್ಯತ್ಯಾಸ ಕಂಡುಬಂದಿದ್ದು, ಕೆಲ ಗ್ರಾಹಕರು ಅಂಚೆ ಕಚೇರಿಗೆ ದೌಡಾಯಿಸಿ ಪೋಸ್ಟ್‌ಮ್ಯಾನ್‌ನನ್ನು ಕರೆಸಿ ವಿಚಾರಿಸಿದರು. ತಾನು ಗಾಹಕರು ಹೇಳಿದಷ್ಟು ಹಣವನ್ನು ಮಾತ್ರ ಡ್ರಾ ಮಾಡಿದ್ದೇನೆ ಎಂದರು. ಆಗ ಪೋಸ್ಟ್ ಮಾಸ್ಟರ್‌ಗೆ ದೂರಿದ ಗ್ರಾಹಕರು, ನಾವು ರೂ.10 ಸಾವಿರ ಡ್ರಾ ಮಾಡಲು ಹೇಳಿದ್ದೆವು. ಆದರೆ ಮೊಬೈಲ್‌ಗೆ ರೂ.10200 ಡ್ರಾ ಮಾಡಿದ ಸಂದೇಶ ಬಂದಿದೆ ಎಂದರು. ಗ್ರಾಹಕ ಕಳಕಪ್ಪ ಹೂಗಾರ ಅವರು ನಾನು 1200 ರೂ ಡ್ರಾ ಮಾಡಲು ಹೇಳಿದ್ದೆ. ಆದರೆ ರೂ.1300 ಯಾಕೆ ಡ್ರಾ ಮಾಡಿದ್ದೀರಿ ಎಂದು ಪ್ರಶ್ನಿಸಿದರೆ, ಇನ್ನೋರ್ವ ಗ್ರಾಹಕರು 10,200 ರೂ ಡ್ರಾ ಮಾಡಲು ಹೇಳಿದರೆ, 10, 600 ರೂ. ಡ್ರಾ ಮಾಡಿದ ಸಂದೇಶ ಹೇಗೆ ಬಂದಿದೆ ಪ್ರಶ್ನಿಸಿದರು.

ಅದಕ್ಕೆ ಪೋಸ್ಟ್‌ಮ್ಯಾನ್ ಪ್ರವೀಣ ಗೌಡರ, ನೀವು 10,600 ರೂ ಡ್ರಾ ಮಾಡಿದ್ದೀರಿ, ನಿಮಗೆ 10,700 ರೂ. ನೀಡಿದ್ದೇನೆ ಎಂದರು. ಸ್ಥಳದಲ್ಲಿದ್ದ ಗ್ರಾಹಕರು 100 ರೂ ಹೆಚ್ಚಿಗೆ ಹೇಗೆ ಕೊಡಲು ಹೇಗೆ ಸಾಧ್ಯ, ನಾವು ಹೇಳಿದಷ್ಟೇ ಹಣವನ್ನು ಡ್ರಾ ಮಾಡಿ ನೀಡಬೇಕು. ಹೆಚ್ಚಿಗೆ ಏಕೆ ನೀಡಿದ್ದೀರಿ ಎಂದು ಪ್ರಶ್ನಿಸಿದಾಗ ಪೋಸ್ಟ್‌ಮ್ಯಾನ್ ಉತ್ತರಿಸಲು ತಡವರಿಸಿದರು.

> ಪೋಸ್ಟ್ ಮಾಸ್ಟರ್ ಸಿದ್ದಪ್ಪ ಅರಿಕೇರಿ ಅವರು, ಗ್ರಾಹಕರು ಸದರಿ ಘಟನೆಯ ಕುರಿತು ಪೋಸ್ಟ್‌ಮ್ಯಾನ್ ವಿರುದ್ಧ ದೂರು ನೀಡಿದರೆ ಅದನ್ನು ಮೇಲಾಧಿಕಾರಿಗಳಿಗೆ ಕಳುಹಿಸಲಾಗುವುದು ಎಂದರು.

# 'ಖೇಲೋ ಇಂಡಿಯಾ' ಕುಸ್ತಿ ಪಂದ್ಯಾವಳಿಯಲ್ಲಿ ಭುವನೇಶ್ವರಿ ಕೋಳಿವಾಡ ಸಾಧನೆ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಜ. ತೋಂಟದಾರ್ಯ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಭುವನೇಶ್ವರಿ ಕೋಳಿವಾಡ ಇತ್ತೀಚೆಗೆ ಚನ್ನೈನಲ್ಲಿ ಜರುಗಿದ ಕೇಂದ್ರ ಸರ್ಕಾರದ 'ಖೇಲೋ ಇಂಡಿಯಾ' ರಾಷ್ಟ್ರಮಟ್ಟದ ಬಾಲಕಿಯರ 61 ಕೆ.ಜಿ ವಿಭಾಗದ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಿ ತೃತೀಯ ಸ್ಥಾನ ಪಡೆದು, ರಾಷ್ಟ್ರಮಟ್ಟದ ಖೇಲೋ ಇಂಡಿಯಾ ಕುಸ್ತಿ ಫೆಡರೇಶನ್‌ಗೆ ಅರ್ಹತೆ ಪಡೆದು ಗದಗ ಜಿಲ್ಲೆ ಹಾಗೂ ಕರ್ನಾಟಕ ರಾಜ್ಯಕ್ಕೆ ಕೀರ್ತಿ ತಂದಿದ್ದಾಳೆ.



ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಜಮಖಂಡಿಯಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನದೊಂದಿಗೆ ಮಧ್ಯಪ್ರದೇಶದಲ್ಲಿ ಆಯೋಜಿಸಿದ್ದ ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿಗೆ ಅರ್ಹತೆ ಪಡೆದಿದ್ದಳು. ಮೈಸೂರು ದಸರಾ ಕುಸ್ತಿಯಲ್ಲಿ ಮುಖ್ಯಮಂತ್ರಿ ಪದಕ, ಕಿತ್ತೂರು ಉತ್ಸವ, ಹಂಪಿ ಉತ್ಸವ ಹಾಗೂ ವಿವಿಧ ಜಿಲ್ಲೆಗಳಲ್ಲಿ ಆಯೋಜಿಸಿದ ಕುಸ್ತಿ ಪಂದ್ಯಾವಳಿಗಳಲ್ಲಿ ಶ್ರೇಷ್ಠ ಸಾಧನೆಯನ್ನು ತೋರಿದ್ದಾಳೆ.

ಮೂಲತಃ ಗದಗ ಜಿಲ್ಲೆಯ ಕಣವಿ ಗ್ರಾಮದ ಬಡ ಕುಟುಂಬದಲ್ಲಿ ಜನಿಸಿದರೂ ಬಡತನವನ್ನು ಮೆಟ್ಟಿ ನಿಂತು ತನ್ನ ಕ್ರೀಡಾ ಪ್ರತಿಭೆಯನ್ನು ರಾಷ್ಟ್ರಮಟ್ಟದಲ್ಲಿ ಸಾಧಿಸಿದ ಧೀರ ಬಾಲಕಿಯಾಗಿದ್ದಾಳೆ. ಇವಳಿಗೆ ಗದಗ ಜಿಲ್ಲಾ ಕುಸ್ತಿ ತರಬೇತುದಾರರಾದ ದಿ.ಶರಣಪ್ಪ ಬೇಲೇರಿ ತರಬೇತಿಯನ್ನು ನೀಡಿದ್ದರು. ಪ್ರಸ್ತುತ ಜಿಲ್ಲಾ ಕ್ರೀಡಾಶಾಲೆಯಲ್ಲಿ ತರಬೇತಿಯನ್ನು ಪಡೆಯುತ್ತಿದ್ದಾಳೆ.

ವಿದ್ಯಾರ್ಥಿನಿಯ ಸಾಧನೆಗೆ ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು, ಶಿಕ್ಷಣ ಸಂಸ್ಥೆಯ ಚೇರಮನ್ ಶಿವಾನಂದ ಪಟ್ಟಣಶೆಟ್ಟರ, ಕಾರ್ಯದರ್ಶಿ ಕೊಟ್ರೇಶ ಮೆಣಸಿನಕಾಯಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿ ವರ್ಗ, ಶಾಲೆಯ ಆಡಳಿತ ಮಂಡಳಿ ಸದಸ್ಯರು, ದೈಹಿಕ ಶಿಕ್ಷಕರಾದ ನಾಗರಾಜ ತಳವಾರ, ಎಫ್.ಆರ್. ದೊಡ್ಡಣ್ಣವರ ಸೇರಿದಂತೆ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

# ಪೌರಕಾರ್ಮಿಕರಿಗೆ ಮಾಸ್ಟರ್ ಹೆಲ್ತ್ ಚೆಕ್‌ಅಪ್

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರಸಭೆ ವತಿಯಿಂದ ನಗರಸಭೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಮತ್ತು ಸ್ವಚ್ಛತಾ ಕೆಲಸಗಾರರಿಗೆ ಮಾಸ್ಟರ್ ಹೆಲ್ತ್ ಚೆಕ್‌ಅಪ್ ಕಾರ್ಯಕ್ರಮವನ್ನು ನಗರದ ಶಿರೋಳ್ ನರ್ಸಿಂಗ್ ಹೋಮ್ ಆಸ್ಪತ್ರೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.




ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಗರಸಭೆ ಸದಸ್ಯ ಕೃಷ್ಣ ಪರಪುರ ವಹಿಸಿದ್ದರು. ಅತಿಥಿಗಳಾಗಿ ಖ್ಯಾತ ವೈದ್ಯ ಡಾ. ಜಗದೀಶ್ ಶಿರೋಳ, ಸ್ಥಾಯಿ ಕಮಿಟಿ ಅಧ್ಯಕ್ಷ ಅನಿಲ ಅಬ್ಬಿಗೇರಿ, ಹೈಸ್ಕೂಲ್ ಸ್ಥಾಯಿ ಸಮಿತಿ ಅಧ್ಯಕ್ಷ ಪ್ರಕಾಶ್ ಅಂಗಡಿ, ನಗರಸಭೆ ಸದಸ್ಯೆ ಲಕ್ಷ್ಮೀ ಸಿದ್ದಮನಹಳ್ಳಿ ಪಾಲ್ಗೊಂಡಿದ್ದರು.

ನಗರಸಭೆಯ ನೈರ್ಮಲ್ಯ ಉಸ್ತುವಾರಿ ವಹಿಸಿದ ಪೌರಕಾರ್ಮಿಕರಿಗೆ ಮಾಸ್ಟರ್ ಹೆಲ್ತ್ ಚೆಕ್‌ಅಪ್ ಮಾಡಿಸಲು ಖಈಅ 24.10 ಹಾಗೂ ನಗರಸಭೆ ನಿಧಿಯಲ್ಲಿ ಅನುದಾನ ಕಾಯ್ದಿರಿಸಲಾಗಿದ್ದು, ಎಲ್ಲ ಪೌರಕಾರ್ಮಿಕರು ಆರೋಗ್ಯ ತಪಾಸಣೆಯನ್ನು ಮಾಡಿಸಿ, ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಲು ಕೃಷ್ಣ ಪರಾಪುರ ತಿಳಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಸಹಾಯಕ ಕಾರ್ಯಪಾಲಕ ಅಭಿಯಂತರ ಬಂಡಿವಡ್ಡರ, ಆನಂದ ಬದಿ, ಕಛೇರಿ ವ್ಯವಸ್ಥಾಪಕ ಪರಶುರಾಮ ಶೇರಖಾನೆ, ನಗರಸಭೆಯ ಎಲ್ಲ ದಫೇದಾರರು, ಪೌರಕಾರ್ಮಿಕ ಸಂಘದ ಎಲ್ಲಾ ಪದಾಧಿಕಾರಿಗಳು ಹಾಗೂ ಪೌರಕಾರ್ಮಿಕ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಇಂದಿನ ನೀರು ಪೂರೈಕೆ ವಿವರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಜನವರಿ 31ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 22 ಶಿವಪ್ಪರ ಲೈನ್, ಆಟೋ ಸ್ಟ್ಯಾಂಡ್, ಪ್ರಕಾಶ್ ಅಂಗಡಿಯವರ ಲೈನ್, ಕನ್ನಡ ಶಾಲೆ, ಎಲ್ಲಮ್ಮನ ಗುಡಿ, ದಖನಿಯವರ ಲೈನ್. ವಾರ್ಡ್ ನಂ. 15,16,17 ಡೋರ್‌ಗಲ್ಲಿ, ಡಿಸಿ ಮಿಲ್ ರೋಡ್, ಜವಳಗಲ್ಲಿ, ಶಹಾಪೂರ ಪೇಟೆ, ಮೀನಿನ ಮಾರ್ಕೆಟ್, ಕರ್ನಾಟಕ ಟಾಕೀಸ್ ಲೈನ್, ಮಹೇಂದ್ರಕರ್ ಸರ್ಕಲ್, ಗಾಂಧಿ ಸರ್ಕಲ್, ಬಸವೇಶ್ವರ ಗುಡಿ ಲೈನ್, ಗಣೇಶ ಗುಡಿ ಲೈನ್ ಉಳಿದಭಾಗಗಳು. ವಾರ್ಡ್ ನಂ. 27 ಕೆಎಚ್ ಪಾಟೀಲ್ ಬಡಾವಣೆ, ಹಮಾಲರ ಪ್ಲಾಟ್, ಈಶ್ವರ ಬಡಾವಣೆ ಉಳಿದ ಭಾಗಗಳು.

ವಾರ್ಡ್ ನಂ. 5 ನರಸಾಪೂರ ಆಶ್ರಯ ಕಾಲೋನಿ, ಶಿವನಾಗ ನಗರ 4 ಭಾಗಗಳು, ಗಣೇಶ ನಗರ 4 ಭಾಗಗಳು

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka